# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA









| | | | | | | | |
|---|---|---|---|---|---|---|---|
| ಸಂಪುಟ:01 | ಸಂಚಿಕೆ:165 | ನೋಂದಣಿ ನಂ.:KARKAN27911 | ವಿಜಯನಗರ | 24.11.2023 | ಶುಕ್ರವಾರ | ಪುಟ:04 | ಬೆಲೆ:2 |
| Volume:01 | Issue:165 | Reg.No:KARKAN27911 | VIJAYANAGARA | 24.11.2023 | Friday | Page:04 | Rs:2 |







## ಮೈಕ್ರೋ ನ್ಯೂಸ್

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
> ಡಿ..ವಿ.ಜಿ.

### ವಸತಿ ರಹಿತರ ಸಮೀಕ್ಷೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೂವಿನಹಡಗಲಿ**
ಡೇ-ನಲ್ಮ್‌ಯೋಜನೆಯಡಿ ನಗರದ ವಸತಿ ರಹಿತರ ಆಶ್ರಯ ಉಪಘಟಕದಡಿ ಹೂವಿನಹಡಗಲಿ ಪುರಸಭೆ ವ್ಯಾಪ್ತಿಯಲ್ಲಿ ನಗರದ ವಸತಿರಹಿತರ ಸಮೀಕ್ಷೆಗಾಗಿ ಮೂರನೇ ವ್ಯಕ್ತಿ, ಎನ್.ಜಿ.ಒ.ಗಳಿಂದ ಅರ್ಜಿ ಆಹ್ವಾನಿಸಲಾಗಿದೆ.
ಅರ್ಜಿ ಸಲ್ಲಿಸುವ ಎನ್. ಜಿ.ಒ., ಮೂರನೇ ವ್ಯಕ್ತಿಗಳು ದರ್ಪಣ್ ಪೋರ್ಟಲ್ ನಲ್ಲಿ ನೋಂದಣಿಯಾಗಿರಬೇಕು.
ಸಮೀಕ್ಷೆಯ ಪಟ್ಟಿಯನ್ನು ಹಾಗೂ ಅಗತ್ಯ ದಾಖಲೆಗಳೊಂದಿಗೆ ನ.30 ರೊಳಗಾಗಿ ಕಚೇರಿ ಸಮಯದಲ್ಲಿ ಪುರಸಭೆ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಬೇಕು ಎಂದು ಹೂವಿನಹಡಗಲಿ ಪುರಸಭೆ ಮುಖ್ಯಾಧಿಕಾರಿ ತಿಳಿಸಿದ್ದಾರೆ.

### ಯುವಜನೋತ್ಸವ: ಹೆಸರು ನೋಂದಣಿಗೆ ಸೂಚನೆ

**ಹಂಪಿ ಟೈಮ್ಸ್ ಹೊಸಪೇಟೆ**
2023-24ನೇ ಸಾಲಿನ ವಿಜಯನಗರ ಜಿಲ್ಲಾ ಮಟ್ಟದ ಯುವಜನೋತ್ಸವದ ಕಾರ್ಯಕ್ರಮವನ್ನು ನ.29ರಂದು ಬೆಳಿಗ್ಗೆ 10:30 ಗಂಟೆಗೆ ಹೊಸಪೇಟೆ ಕ್ರೀಡಾ ಸಂಕೀರ್ಣದ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದು, ಭಾಗವಹಿಸುವ ಆಸಕ್ತರುತಮ್ಮ ಹೆಸರು ನೋಂದಾಯಿಸುವಂತೆ ವಿಜಯನಗರ ಯುವ ಸಬಲೀಕರಣ ಮತ್ತುಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಕಾರ್ಯಕ್ರಮದ ಅಂಗವಾಗಿ ವೈಯಕ್ತಿಕ ಹಾಗೂ ತಂಡಗಳಿಗೆ ಕನ್ನಡ, ಆಂಗ್ಲ, ಹಿಂದಿ ಭಾಷೆಯಲ್ಲಿ ಜನಪದ ನೃತ್ಯ, ಜನಪದಗೀತೆ, ವೈಯಕ್ತಿಕಕಥೆ ಬರೆಯುವ ಹಾಗೂ ಪೋಸ್ಟರ ಮೇಕಿಂಗ್ (ಬಿತ್ತಿ ಪತ್ರತಯಾರಿಕೆ), ಭಾಷಣ, ಛಾಯಾಚಿತ್ರಣ ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು, ಸ್ಪರ್ಧೆಗಳಲ್ಲಿ ಭಾಗವಹಿಸುವ ಅರ್ಹತೆ, ಸಮಯ, ಇತರ ವಿವರಗಳನ್ನು ಯುವಸಬಲೀಕರಣ ಮತ್ತುಕ್ರೀಡಾಇಲಾಖೆಯ ಸೂಚನಾ ಫಲಕದಲ್ಲಿ ಪಡೆಯಬಹುದು.

ಯುವಜನೋತ್ಸವ ಕಾರ್ಯಕ್ರಮದಲ್ಲಿ ಸ್ಪರ್ಧಾತ್ಮಕವಲ್ಲದ ವಿಭಾಗಕ್ಕೆ ಸಂಬಂಧಿಸಿದಂತೆ ಸ್ಪರ್ಧೆಗಳನ್ನು ಸಹ ಜಿಲ್ಲಾ ಮಟ್ಟದಲ್ಲಿ ಆಯೋಜನೆ ಮಾಡಲಾವುದು ಮತ್ತು ಆಯ್ಕೆ ಮಾಡಿರಾಜ್ಯ ಮಟ್ಟಕ್ಕೆ ಕಳುಹಿಸುವುದು.

ಸ್ಪರ್ಧೆಗಳನ್ನು ವೈಯಕ್ತಿಕ ಹಾಗೂ ಗುಂಪು ವಿಭಾಗಗಳಲ್ಲಿ ಸಂಘಟಿಸಲಾಗುವುದು. ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಯುವಕ-ಯುವತಿಯರು, ಕಾಲೇಜಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರು 15 ರಿಂದ 29 ವರ್ಷದೊಳಗಿನವರು ಭಾಗವಹಿಸಬಹುದು. ಸ್ಪರ್ಧೆಗಳ ನಿಯಮಗಳು ಅನ್ವಯಿಸುತ್ತವೆ. ಸ್ಪರ್ಧೆಗಳಲ್ಲಿ ಭಾಗವಹಿಸಲು ಕಡ್ಡಾಯವಾಗಿ ಆಧಾರಕಾರ್ಡ ಹಾಗೂ ಬ್ಯಾಂಕ್ ಖಾತೆಝುರಾಕ್ಸ ಪ್ರತಿಯನ್ನುತರಬೇಕು.

ಜಿಲ್ಲೆಯ ಎಲ್ಲಾ ತಾಲ್ಲೂಕಿನಯುವ ಸಂಘಗಳು, 15 ರಿಂದ 29 ವರ್ಷದೊಳಗಿನ ಯುವಕ, ಯುವತಿಯರು, ಶಾಲಾ ಕಾಲೇಜಿನ ಕಲಾವಿದರುತಮ್ಮ ಹೆಸರನ್ನು ನೋಂದಾಯಿಸಲು ಎಸ್.ಎಸ್.ಎಲ್.ಸಿ ಅಂಕ ಪಟ್ಟಿ & ಜನನ ಪ್ರಮಾಣ ಪತ್ರದೊಂದಿಗೆ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತುಕ್ರೀಡಾಇಲಾಖೆಯ, ವಿಜಯನಗರ. ದೂ.ಸಂ: 9972552385, 8217324522 & 9483480101, ಇಲ್ಲಿಗೆ ಸಂಪರ್ಕಿಸಬಹುದಾಗಿದೆ.

# ಕಾಯಕ ನಿಷ್ಠೆಯಿಂದ ಸಕಲವೂ ಸಾಧ್ಯ

## ಜಗದ್ಗುರು ಶ್ರೀ ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಹೇಳಿಕೆ। ಹೊಸಪೇಟೆಯಲ್ಲಿ ಶಿಲಾಮಠ ಉದ್ಘಾಟನೆ




**■ ಹಂಪಿ ಟೈಮ್ಸ್ ಹೊಸಪೇಟೆ**
ವಿರೋಧಿಗಳನ್ನೆ ಮಣಿಸಿ ಶಿಷ್ಯರನ್ನಾಗಿಸಿ ಕೊಳ್ಳುವ ಶಕ್ತಿ ಕಾಯಕ ನಿಷ್ಠೆಗಿದೆ ಎಂಬುದನ್ನು ಸಾಬೀತು ಮಾಡಿದವರು ಲಿಂಗೈಕ್ಯೆ ಜಗದ್ಗುರು ಶ್ರೀ ಡಾ.ಸಂಗನಬಸವ ಸ್ವಾಮಿಗಳು ಎಂದು ಜಗದ್ಗುರು ಶ್ರೀ ಬಸವಲಿಂಗ ಮಹಾಸ್ವಾಮಿಗಳು ಹೇಳಿದರು. ನಗರದ ಶ್ರೀ ಕೊಟ್ಟೂರು ಸಂಸ್ಥಾನ ಮಠದಲ್ಲಿ ಗುರುವಾರ ಜರುಗಿದ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು. ಸ್ವಾಮಿಜಿಗಳಾದ್ರೆ ಕೇವಲ ಮಾತನಾಡುವುದಲ್ಲ ಲಿಂಗಪೂಜಿ ಶಕ್ತಿ ಗಳಿಸಿಕೊಳ್ಳಬೇಕು. ಶ್ರೀಮಠದ ಕಾರ್ಯಗಳೆಲ್ಲವೂ ಲಿಂಗೈಕ್ಯ ಶ್ರೀಗಳ ದೂರದೃಷ್ಟಿಯಾಗಿವೆ. ಆರಂಭದಲ್ಲಿ ಶ್ರೀಮಠದ ಜಗದ್ಗುರುಗಳು ಭಕ್ತರು, ಆರ್ಥಿಕ, ಸಾಮಾಜಿಕ ಸೇರಿದಂತೆ ಅನೇಕ ಸಮಸ್ಯೆಗಳನ್ನು ಎದುರಿಸಿದ್ದಾರೆ. ಶಾಖಾ ಮಠಗಳು ಜೀರ್ಣಗೊಂಡಿದ್ದವು. ಅಜ್ಜನವರ ನಿರಂತರ ಕಾಯಕ ನಿಷ್ಠೆ ಬದಲಾವಣೆಗೆ ಪ್ರೇರಣೆಯಾಗಿದೆ. ಅತ್ಯಂತ ಭರವಸೆಯೊಂದಿಗೆ ನನಗೆ ಅಧಿಕಾರವಹಿಸಿದ್ದಾರೆ. ಅವರ ಅಂತಃ-ಕರಣ ಆಶೀರ್ವಾದಿಂದ ಕೆಲಸ ಮಾಡುತ್ತಿದ್ದೇನೆ. ಅಜ್ಜನವರ ಸ್ಮರಣೆ ನನಗೆ ಕಣ್ಣೀರು ತರಿಸುತ್ತದೆ. ಸ್ವಾರ್ಥಕ್ಕಾಗಿ ಬದುಕಬಾರದೆಂಬುದನ್ನು ಜೀವನದುದ್ದಕ್ಕೂ ಸಾರಿದ್ದಾರೆ. ಓದುದ ತಕ್ಷಣ ಪರಿಣಾಮ ಬೀರದು. ಅಂತಃಶಕ್ತಿಪ್ರೇರಣೆಗೊಳ್ಳಬೇಕು. ಈಗ ಶಾಖಾ ಮಠಗಳ ಜೀರ್ಣೋದ್ಧಾರ ಕಾರ್ಯಗಳು ನಡೆಯುತ್ತಿವೆ. ಭಕ್ತರು ತನು ಮನ ಧನದಿಂದ ಸಹಕರಿಸುತ್ತಿದ್ದಾರೆ. ಗುರುಗಳು ಅತ್ಯಂತ ಅಮೂಲ್ಯ ಮತೊಂದು ಹೇಳಿದ್ದಾರೆ. ಎಲ್ಲರ ಮಾತು ಕೇಳು, ಕೊನೆಗೆ ನಿನ್ನದೇ ಆದ ತೀರ್ಮಾನ ತೆಗೆದುಕೋ ಎಂದು ಆಶೀರ್ವದಿಸಿದ್ದಾರೆ ಆಶೀರ್ವಾದದಂತೆ ನಡೆಯುತ್ತೇನೆ





### ಕಲ್ಯಾಣವನ್ನೆ ತೊರೆದ ಬಸವಣ್ಣ

ಶ್ರೀ ಜಗದ್ಗುರು ಮೂರುಸಾವಿರ ಮಠದ ಡಾ.ಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿಗಳು ಹಂಪೆ ಹೇಮಕೂಟ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಗುರುಪರಂಪರೆ ದ್ವಿತಿಯ ಮುದ್ರಣಗೊಂಡ ಗ್ರಂಥ ಬಿಡುಗಡೆ ಮಾಡಿ ಮಾತನಾಡಿದರು. ವಿಶ್ವಗುರು ಬಸವಣ್ಣ ಮಂತ್ರಿ ಪದವಿಯಲ್ಲಿದ್ದಾಗಲೂ ತತ್ವ ಸಿದ್ಧಾಂತಗಳ ಪರಿಪಾಲನೆಯಲ್ಲಿ ಯಾರೊಂದಿಗೂ ರಾಜಿಯಾಗಲಿಲ್ಲ. ಬಸವಣ್ಣನವರ ನಡೆ ನುಡಿ ಒಂದೇ ಎಂದು ಬದುಕಿ ತೋರಿಸಿದರು. ಹೊಂದಾಣಿಕೆಗೆ ಎಂದೂ ಒಪ್ಪಲಿಲ್ಲ. ತತ್ವ ಸಿದ್ದಾಂತಗಳ ಪಾಲನೆಗಾಗಿ ಅವರು ಕಲ್ಯಾಣವನ್ನೇ ತೊ-ರೆದರು. ಆಧ್ಯಾತ್ಮಕ ಚಿಂತನೆಗಳತ್ತ ಚಿತ್ತ ಹರಿಸಬೇಕು, ಸಂಸ್ಕಾರಯುತ ಸಮಾಜ ನಿರ್ಮಾಣ ಮಾಡಬೇಕೆಂಬ ಕಾರಣದಿಂದಲೇ ಲಿಂಗೈಕ್ಯ ಜಗದ್ಗರು ಡಾ.ಸಂಗನಬಸವ ಮಹಾಸ್ವಾಮಿಗಳು ಬಸವ ಪುರಾಣ, ಪ್ರವಚನಗಳನ್ನು ನಾಡು ಸೇರಿದಂತೆ ಹೊರ ರಾಜ್ಯ ಆಂಧ್ರದಲ್ಲೂ ಆರಂಭಿಸಿದರು. ಅವರ ಆಶೀರ್ವಾದಿಂದ ಈಗಿನ ಕ್ರಿಯಾಶೀಲ ಜಗದ್ಗರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಶ್ರೀಗಳ ಸ್ಮರಣಾರ್ಥ ಶಿಲಾಮಠ, ಶ್ರೀ ಕಪ್ಪಿನ ಚನ್ನಬಸವೇಶ್ವರ



ಅತಿಥಿಗೃಹ ಮತ್ತು ಶ್ರೀ ಪ್ರೌಢದೇವರಾಯ ವಸತಿಯುತ ಪ್ರಸಾದ ನಿಲಯಗಳನ್ನು ನಿರ್ಮಿಸಿರುವುದು ಶ್ಲಾಘನೀಯ ಕಾರ್ಯ. ಭಕ್ತರ ಮಕ್ಕಳು ಶೈಕ್ಷಣಿಕವಾಗಿ ಬೆಳೆಯಬೇಕು. ಶಿಕ್ಷಣದಿಂದಲೇ ಬದಲಾವಣೆ ಸಾಧ್ಯ ಎಂಬುದನ್ನು ಶ್ರೀಗಳು ಅರಿತಿದ್ದಾರೆ. ಚಿಕ್ಕ ವಯಸ್ಸಿನಲ್ಲೆ 75ಕ್ಕೂ ಅಧಿಕ ಶಾಖಾ ಮಠಗಳ ನಿರ್ವಹಣೆ ಮಾಡುತ್ತಿದ್ದಾರೆ. ಸ್ವತಃ ಜಗದ್ಗುರುಗಳಾಗಿದ್ದರೂ, ನಾಡಿನ ಜಗದ್ಗುರುಗಳನ್ನು ಬಸವದರ್ಶನದ ಧಾರ್ಮಿಕ ಕಾರ್ಯಕ್ರಮದಲ್ಲಿ ಆಹ್ವಾನಿಸುತ್ತಿದ್ದಾರೆ. ಹಮ್ಮು ಬಿಮ್ಮುಗಳನ್ನು ಬಿಟ್ಟು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿರುವ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಶ್ರೀಗಳು ಮಾದರಿಯಾಗಿದ್ದಾರೆ ಎಂದರು.

### ಲಿಂಗಾಯತ ಮಠಗಳು ದೇಶಕ್ಕೆ ಮಾದರಿ

ಗದಗಿನ ಶ್ರೀಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಮಾತನಾಡಿ, ದೇಶದ ಎಲ್ಲಾ ಮಠಗಳಿಗೂ ಕರ್ನಾಟಕದ ಲಿಂಗಾಯತ ಮಠಗಳು ಮಾದರಿ, ಪ್ರೇರಣೆಯಾಗಿವೆ. ಬಸವಾದಿ ಶರಣ-ರು ತೋರಿದ ಮಾರ್ಗದಲ್ಲಿ ವಿರಕ್ತ ಮಠಗಳು ನಡೆಯುತ್ತಿವೆ. ಲಿಂಗಾಯತ ಮಠಗಳು ಬಸವಾದಿ ಶರಣರ ಸಂದೇಶಗಳ ಪಾಲನೆಯಲ್ಲಿ ತೊಡಗಿಸಿಕೊಂಡಿವೆ. ಅನ್ನ, ಅಕ್ಷರ, ದಾಸೋಹ ನೀಡುತ್ತಿವೆ. ಕೊಟ್ಟೂರುಸ್ವಾಮಿ ಮಠ ಭವ್ಯ ಗುರುಪರಂಪರೆಯನ್ನು ಹೊಂದಿದ ಮಠವಾಗಿದೆ. ಅಜ್ಞಾನ ತೊಲಗಿಸಲೆಂದೆ ಲಿಂಗಾಯತ ಮಠಗಳು ಶಿಕ್ಷಣ ಕೇಂದ್ರಗಳನ್ನು ತೆರೆದಿವೆ. ಶಿಕ್ಷಣದಿಂದ ಮಾತ್ರ ದಾರಿದ್ರ್ಯ, ಬಡತನ, ಅಜ್ಞಾನ, ಮೂಢನಂಬಿಕೆಗಳನ್ನು ತೊಲಗಿಸಲು ಸಾಧ್ಯ ಹಾನಗಲ್ ಶ್ರೀ ಕುಮಾರಸ್ವಾಮಿಗಳು ಸಮಾಜ ಎಂಬ ಮೂರಕ್ಷರವನ್ನು ಮಂತ್ರವಾಗಿಸಿಕೊಂಡಿದ್ದರು. ಸಮಾಜದ ಹಿತಕ್ಕಾಗಿ ಬದುಕಿ, ಧಾರ್ಮಿಕ, ಸಂಸ್ಕೃತಿಯನ್ನು ಉಳಿಸಿ ಬೆಳೆಸಿದರು. ಲಿಂಗೈಕ್ಯ ಡಾ.ಸಂಗನಬಸವ ಮಹಾಸ್ವಾಮಿಗಳು ನಾಡಿಗೆ ನೀಡಿದ ಕೊಡುಗೆ ಅಪಾರವಾಗಿದ್ದು ಅವರನ್ನು ಮೀರಿಸುವ ಸ್ವಾಮೀಜಿಗಳು ಮತ್ತೊಬ್ಬರಿಲ್ಲ. ಅಸಾಧ್ಯ ಕಾರ್ಯಸಾಧಕರು ಪುಣ್ಯಪುರುಷರಾಗಿದ್ದಾರೆ. ಮಾನವೀಯ ಮೌಲ್ಯಗಳ ಉಳಿಯಬೇಕೆಂದರೆ ಸಮಾಜಕ್ಕೆ ಅರ್ಪಿಸಿಕೊಂಡವರನ್ನು ಸದಾ ಸ್ಮರಿಸಬೇಕು. ಮಹಾಪುರುಷರ ಸ್ಮರಣೆಗಳಿಂದ ಜ್ಞಾನದ ಜ್ಯೋತಿ ಎಂದೂ ನಂದದು. ಶ್ರೀಕೊಟ್ಟೂರುಸ್ವಾಮಿ ಮಠವು ಹಂಪಿ ಪರಿಸರದಲ್ಲಿ ಪವಿತ್ರ ನೆಲದಲ್ಲಿದೆ. ಬಸವಾದಿ ಶರಣರ ಸಾಹಿತ್ಯ ಉಳಿಸಿ, ಬೆಳೆಸಲು ಪ್ರೇರಣೆ ನೀಡಿದ ಸ್ಥಳವಾಗಿದೆ ಎಂದರು. ವಿವಿಧ ಶಾಖಾ ಮಠಗಳ ಶ್ರೀಗಳು ಉಪಸ್ಥಿತರಿದ್ದರು. ಶರಣಯ್ಯ ಚರಂತಿಮಠ ನಿರ್ವಹಿಸಿದರು.

# ನಾಗೇನಹಳ್ಳಿಯಲ್ಲಿ ಲಾರ್ವಹಾರಿ ಮೀನು ಸಾಕಾಣಿಕೆ ತೊಟ್ಟಿ ಉದ್ಘಾಟನೆ

**■ ಹಂಪಿ ಟೈಮ್ಸ್ ಹೊಸಪೇಟೆ**
ರಾಷ್ಟ್ರೀಯರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮದಡಿ ಹೊಸಪೇಟೆ ತಾಲ್ಲೂಕಿನ ನಾಗೇನಹಳ್ಳಿ ಗ್ರಾಮದಲ್ಲಿ ನಿರ್ಮಿಸಲಾದ ಲಾರ್ವಹಾರಿ ಮೀನು ಸಾಕಾಣಿಕೆ ತೊಟ್ಟಿಯನ್ನು ಗುರುವಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಎಲ್. ಆರ್.ಶಂಕರ್ ನಾಯ್ಕ್ ಅವರು ಉದ್ಘಾಟಿಸಿದರು.
ಈ ವೇಳೆ ಡಿ.ಹೆಚ್.ಓ ಅವರು ಮಾತನಾಡಿ, ಸಾಂಕ್ರಾಮಿಕ ಕಾಯಿಲೆಗಳು ಸೊಳ್ಳೆಗಳಿಂದ ಹರಡುತ್ತದೆ. ಡೆಂಗ್ಯೂ, ಮಲೇರಿಯಾದಂತಹ ರೋಗಕ್ಕೆ ಕಾರಣವಾಗುವ ಈಡೀಸ್ ಈಡಿಪ್ಟೆ ಸೊಳ್ಳೆಯು ಸ್ವಚ್ಛವಾದ ನೀರಿನಲ್ಲಿಯೇ ಉತ್ಪತ್ತಿಯಾಗುತ್ತದೆ. ಈ ಸೊಳ್ಳೆಯ ಮರಿ ಲಾರ್ವಗಳು ನಿಂತ ನೀರಿನಲ್ಲಿ ಮತ್ತು ಶೇಖರಿಸಿಟ್ಟ ನೀರಿನಲ್ಲಿ ಉತ್ಪತ್ತಿಯಾಗುತ್ತವೆ. ಜೈವಿಕ ವಿಧಾನದ ಮೂಲಕ ಲಾರ್ವಗಳನ್ನು ನಾಶಪಡಿಸಲು ಗಪ್ಪಿ ಮತ್ತು ಗ್ಯಾಂಬೂಸಿಯ ಮೀನುಗಳನ್ನು ಬಳಸಲಾಗುತ್ತದೆ.




ಈ ಮೀನುಗಳನ್ನು ಲಾರ್ವಹಾರಿ ಮೀನು ಸಾಕಾಣಿಕೆ ತೊಟ್ಟಿಗಳಲ್ಲಿ ಸಾಕಿ ನಂತರ ಸೊಳ್ಳೆಗಳ ಉತ್ಪತ್ತಿ ತಾಣಗಳಿಗೆ ಬಿಡಲಾಗುವುದು. ಗಪ್ಪಿ ಮತ್ತು ಗ್ಯಾಂಬೂಸಿಯ ಮೀನುಗಳು ಲಾರ್ವಗಳನ್ನು ತಿನ್ನುವುದರಿಂದ ಡೆಂಗ್ಯೂ ಕಾಯಿಲೆ ನಿಯಂತ್ರಣವಾಗಲಿವೆ. ಡೆಂಗ್ಯೂ ಕಾಯಿಲೆ ನಿಯಂತ್ರಣಕ್ಕೆಈ ಲಾರ್ವಹಾರಿ ಮೀನುಗಳು ತುಂಬ ಮಹತ್ವದ ಪಾತ್ರ ವಹಿಸುತ್ತಿರುವುದು ವೈಜ್ಞಾನಿಕವಾಗಿದೃಢ ಪಟ್ಟಿದೆ ಎಂದು ತಿಳಿಸಿದರು.
ನಾಗೇನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷರು ಮಾತನಾಡಿ, ಡೆಂಗ್ಯೂರೋಗ ನಿಯಂತ್ರಣದಲ್ಲಿ ಆರೋಗ್ಯ ಇಲಾಖೆ ಹೊಸ ಪ್ರಯೋಗಕ್ಕೆ ನಾಂದಿ ಹಾಡಿದ್ದು, ಗ್ರಾಮಪಂಚಾಯತ್ ವತಿಯಿಂದ ಸೊಳ್ಳೆ ನಿಯಂತ್ರಣಕ್ಕಾಗಿ ಅಗತ್ಯ ಕ್ರಮ ಕೈಗೊಳ್ಳಲಾಗುವುದುಎಂದು ಹೇಳಿದರು.
ಕಾರ್ಯಕ್ರಮದಲ್ಲಿ ಜಿಲ್ಲಾ ವಿಬಿಡಿಸಿ ಅಧಿಕಾರಿ ಡಾ.ಕಮಲಮ್ಮ, ತಾಲೂಕು ಆರೋಗ್ಯ ಅಧಿಕಾರಿ ಡಾ.ಭಾಸ್ಕರ್, ವೈದ್ಯಾಧಿಕಾರಿ ಡಾ.ಬಸವರಾಜ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡಮನಿ ಸೇರಿದಂತೆ ನಾಗೇನಹಳ್ಳಿ ಪಂಚಾಯತ್‌ಅಭಿವೃದ್ಧಿ ಅಧಿಕಾರಿ, ಗ್ರಾ.ಪಂ ಸದಸ್ಯರು, ಆರೋಗ್ಯ ಇಲಾಖೆಯ ಸಿಬ್ಬಂದಿ, ಆಶಾ ಕಾರ್ಯಕರ್ತರು ಹಾಗೂ ಗ್ರಾಮದ ಪ್ರಮುಖರು ಉಪಸ್ಥಿತರಿದ್ದರು.

## ಈಶಾನ್ಯ ಪದವೀಧರ ಕ್ಷೇತ್ರ್ರದಕರಡು ಮತದಾರರ ಪಟ್ಟಿ ಪ್ರ್ರಕಟ : ಆಕ್ಷೇಪಣೆ ಅವಕಾಶ

**ಹಂಪಿ ಟೈಮ್ಸ್ ಹೊಸಪೇಟೆ**

ಈಶಾನ್ಯ ಕರ್ನಾಟಕ ಪದವೀಧರರ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಆಕ್ಷೇಪಣೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಈಶಾನ್ಯ ಕರ್ನಾಟಕ ಪದವೀಧರ ಕ್ಷೇತ್ರದ ಸಹಾಯಕ ಮತದಾರರ ನೋಂದಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಅವರು ತಿಳಿಸಿದ್ದಾರೆ.

ಅರ್ಹತಾ ದಿನಾಂಕ: 1.11.2023ಕ್ಕೆ ಅನ್ವಯಿಸುವಂತೆ ಈಶಾನ್ಯ ಕರ್ನಾಟಕ ಪದವೀಧರ ಮತದಾರರಪಟ್ಟಿ ಪರಿಷ್ಕರಣೆ-2024ನ್ನು ಅಕ್ಟೋಬರ್ 1ರಿಂದ ಅರ್ಜಿ ಸ್ವೀಕರಿಸಿ ಅಂತಿಮ ನ.6ರ ವರೆಗೆ ವಿಧಾನಸಭಾಕ್ಷೇತ್ರವಾರು ವಿಜಯನಗರ ಜಿಲ್ಲೆಯ ಅರ್ಹ ಮತದಾರರ ಪಟ್ಟಿಯನ್ನು ಜಿಲ್ಲಾಧಿಕಾರಿ ಕಚೇರಿ, ಸಹಾಯಕ ಆಯುಕ್ತರ ಕಚೇರಿ, ಜಿಲ್ಲೆಯ ಎಲ್ಲಾ ತಾಲ್ಲೂಕು ಕಚೇರಿ, ನಗರಸಭೆ, ಪಟ್ಟಣ ಪಂಚಾಯತ್, ಪುರಸಭೆ ಕಚೇರಿಗಳಲ್ಲಿ ಹಾಗೂ ಜಿಲ್ಲಾ ವೆಬ್‌ಸೈಟ್ ಮತ್ತು ಚುನಾವಣಾ ಆಯೋಗದ ವೆಬ್‌ಸೈಟ್ ನಲ್ಲಿಮತದಾರರ ಮಾಹಿತಿಗಾಗಿ ಪ್ರಚುರಪಡಿಸಲಾಗಿದೆ.

ಮತದಾರರ ವಿವರ:ವಿಜಯನಗರಜಿಲ್ಲೆಯ 88-ಹಡಗಲಿ, 89-ಹಗರಿಬೊಮ್ಮನಹಳ್ಳಿ, 90-ವಿಜಯನಗರ, 96-ಕೂಡ್ಲಿಗಿ, 104-ಹರಪನಹಳ್ಳಿ ವಿಧಾನಸಭಾ ಕ್ಷೇತ್ರಗಳು ಒಳಗೊಂಡು 10,566 ಪುರುಷ ಮತದಾರರು, 5665 ಮಹಿಳೆಯರು ಹಾಗೂ ಇತರೆ2 ಸೇರಿ ಜಿಲ್ಲೆಯಲ್ಲಿ ಒಟ್ಟು 16,233 ಪದವೀಧರ ಮತದಾರರಿದ್ದಾರೆ.

ಈ ಕರಡು ಮತದಾರರ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಡಿಸೆಂಬರ್ 9ರಂದು ಅಂತಿಮ ದಿನವಾಗಿದ್ದು, ಈ ಅವಧಿಯಲ್ಲಿ ಸ್ವೀಕೃತವಾಗುವ ಯಾವುದೇ ಆಕ್ಷೇಪಣೆ ನಿಯಮಾನುಸಾರ ಪರಿಶೀಲನೆ ಮಾಡಿ ವಿಲೇವಾರಿ ಮಾಡಲಾಗುವುದು. ಡಿ.30ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಚುರ ಪಡಿಸಲಾಗುವುದು.

ಅರ್ಹ ಮತದಾರರು ಮತದಾರರ ಪಟ್ಟಿಯಿಂದದೂರ ಇರದಂತೆ ಅಂತಿಮ ಮತದಾರರ ಪಟ್ಟಿ ಪ್ರಚುರ ಪಡಿಸಿದ ನಂತರ ಸಹ ಚುನಾವಣೆ ಘೋಷಣೆಯಾಗುವವರೆಗೆ ನಿರಂತರ ಮತದಾರರ ನೋಂದಣಿ ಪ್ರಕ್ರಿಯೆ ಚಾಲನೆ ಇರುತ್ತದೆ. ಅರ್ಹ ಮತದಾರರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ನೋಂದಣಿ ಮಾಡಲು ನಮೂನೆ-18ನ್ನು ಸಲ್ಲಿಸಲು ಅವಕಾಶವಿರುತ್ತದೆ.

## ಕಾಯಕನಿಷ್ಠ ಶರಣ ದಂಪತಿಗಳು ಕುಂಬಾರ ಗುಂಡಯ್ಯ ಮತ್ತು ಕೇತಲಾದೇವಿ

ಸತಿಪತಿಗಳೊಂದಾದ ಭಕ್ತಿಯು ಹಿತವಪ್ಪುದು ಶಿವಂಗೆ... ಎಂಬ ಶಿವಶರಣರ ಹೇಳಿಕೆಯಂತೆ ಬದುಕು ನಡೆಸಿದವರು ಕಾಯಕನಿಷ್ಠ ಶರಣ ದಂಪತಿಗಳಾದ ಕುಂಬಾರ ಗುಂಡಯ್ಯ ಮತ್ತು ಕೇತಲಾದೇವಿ.

ಸ್ವಚ್ಛ ಮಾಡಿದ ಜೇಡಿಮಣ್ಣನ್ನು ತುಳಿದು ಹದ ಮಾಡುವಾಗ ವಿಠಲನನ್ನು ನೆನೆದು ಭಜಿಸುತ್ತಾ ಭಕ್ತಿಯ ಪರಾಕಾಷ್ಠೆಯಲ್ಲಿ ತೇಲಿದ ಮಹಾರಾಷ್ಟ್ರದ ಪಂಡರಿನಾಥನ ಭಕ್ತನಾದ ಗೋರ ಎಂಬ ಕುಂಬಾರನ ಕತೆಯನ್ನು ನಾವೆಲ್ಲ ಕೇಳಿದ್ದೇವೆ. ಆ ಗೋರ ಕುಂಬಾರನು ವಿಠಲನ ಧ್ಯಾನದಲ್ಲಿ ಮೈ ಮರೆತು ಕುಣಿಯುವಾಗ ಮಣ್ಣಿನ ಜೊತೆಯಲ್ಲಿ ತನ್ನ ಮಗನನ್ನು ತುಳಿದ ಕಥೆ ಆತನ ಭಕ್ತಿಯ ಪರಾಕಾಷ್ಠೆಯನ್ನು ತಿಳಿಸುತ್ತದೆ. ಆದರೆ ಶಿವಶರಣನಾದ ಕುಂಬಾರ ಗುಂಡಯ್ಯ ತಾನೇ ತಯಾರಿಸಿದ ಮಡಕೆಯನ್ನು ಘಟದಂತೆ ಬಳಸಿ ತನ್ನ ಕೈಬೆರಳುಗಳಿಂದ ಅದರ ಮೇಲೆ ತಾಳ ಹಾಕುತ್ತಾ ಹಾಡತೊಡಗಿದರೆ ಸಾಕ್ಷಾತ ಆ ಪರಶಿವನೇ ಬಂದು ಕುಣಿದನೆಂದು ಹೇಳುತ್ತಾರೆ. ಅಂತಹ ಭಕ್ತಿ ಕುಂಬಾರ ಗುಂಡಯ್ಯನದು.

ಭಾರತ ದೇಶದ ಮೂಲ ವೃತ್ತಿ ಒಕ್ಕಲುತನ. ಆಯಗಳು ಎಂದು ಕರೆಯುವ ಕುಂಬಾರಿಕೆ, ಕಮ್ಮಾರಿಕೆ, ಚಮ್ಮಾರಿಕೆ, ಬಡಿಗತನ, ಹೀಗೆ ಹತ್ತು ಹಲವು ಉದ್ಯೋಗಗಳು ಒಕ್ಕಲುತನದ ಜೊತೆಗೆ ಕಾರ್ಯನಿರ್ವಹಿಸುತ್ತವೆ. ಇವುಗಳಲ್ಲಿ ಒಂದಾದ ಕುಂಬಾರಿಕೆಯಲ್ಲಿ ಪ್ರಮುಖವಾಗಿ ಚಿಕ್ಕಪುಟ್ಟ ಕುಡಿಕೆಗಳಿಂದ ಹಿಡಿದು ಅಡುಗೆಗೆ ಬಳಸುವ ಗಡಿಗೆಗಳು, ನೀರನ್ನು ತುಂಬಿಡಲು ಬಳಸುವ ತತ್ರಾಣಿಗಳು, ಮದುವೆಯಲ್ಲಿ ತರುವ ಐರಾಣಿ ಗಡಿಗೆಗಳು, ಒಕ್ಕಲುತನಕ್ಕೆ ಬಳಸುವ ದೊಡ್ಡ ದೊಡ್ಡ ನೀರಿನ ಬಾನಿಗಳು ಹೀಗೆ ಹತ್ತು ಹಲವು ಬಗೆಯ ವಿವಿಧ ಗಾತ್ರದ ಮಡಕೆಗಳನ್ನು ತಯಾರಿಸುತ್ತಾರೆ. ಯಾವುದೇ ಉಪಕರಣಗಳನ್ನು ಬಳಸದೆ ಕೈಯಿಂದಲೇ ಗಡಿಗೆಗಳನ್ನು ತಯಾರಿಸುವ ಕುಂಬಾರರನ್ನು ಕೈಗುಂಬಾರರೆಂದು, ಚಕ್ರವನ್ನು ಬಳಸಿ ಗಡಿಗೆಗಳನ್ನು ತಯಾರಿಸುವ ಕುಂಬಾರರನ್ನು ಚಕ್ರ ಕುಂಬಾರರೆಂದು ಕರೆಯುತ್ತಾರೆ. ಈ ಚಕ್ರದಲ್ಲೂ ಸಣ್ಣ ಚಕ್ರ, ದೊಡ್ಡ ಚಕ್ರ, ಮರದ ಚಕ್ರ ಮತ್ತು ಕಲ್ಲು ಚಕ್ರ ಎಂಬ ಪ್ರಭೇದಗಳಿವೆ. ಇಂದಿಗೂ ನಮ್ಮ ಉತ್ತರ ಕರ್ನಾಟಕದಲ್ಲಿ ಚಕ್ರಸಾಲಿ ಎಂದು ಅಡ್ಡ ಹೆಸರನ್ನು ಹೊಂದಿರುವ ಕುಂಬಾರರು ಇದ್ದಾರೆ. ಈ ಕುಂಬಾರರು ಹೆಚ್ಚಾಗಿ ಲಿಂಗಾಯತ ಧರ್ಮವನ್ನು ಪಾಲಿಸುತ್ತಿದ್ದು ಕೆಲವೇ ಕೆಲವು ಜನರು ವೈಷ್ಣವ ಧರ್ಮವನ್ನು ಕೂಡ ಪಾಲಿಸುತ್ತಾರೆ.

ಹಿಮರಾಜನು ತನ್ನ ಮಗಳು ಗಿರಿಜಾ ದೇವಿಯನ್ನು ಶಿವನಿಗೆ ವಿವಾಹ ಮಾಡಿ ಕೊಡುವಾಗ, ಧಾರೆಯೆರೆಯುವ ಹೂಜಿಯನ್ನು ಮಾಡಲು ತನ್ನ ದಿವ್ಯ ಶಕ್ತಿಯಿಂದ ವಿಷ್ಣುವಿನ ಸುದರ್ಶನ ಚಕ್ರವನ್ನು ತಿಗರಿಯನ್ನಾಗಿಸಿ, ಬ್ರಹ್ಮನ ಕೈಯಲ್ಲಿನ ಪುಸ್ತಕದ ಮೊಳೆಯನ್ನು ತಿಗರಿಯ ಮೊಳೆಯನ್ನಾಗಿಸಿ, ಶಿವನ ಕೈಯಲ್ಲಿನ ದಂಡವನ್ನು ತಿಗರಿಯನ್ನು ತಿರುಗಿಸುವ ಕೋಲನ್ನಾಗಿ ಮತ್ತು ತನ್ನ ಜನಿವಾರವನ್ನು ತಿಗರಿಯಿಂದ ಪೂಜೆಯನ್ನು ಬೇರ್ಪಡಿಸುವ ಕೊರೆದಾರವಾಗಿ ಬಳಸಿದನು. ಗಡಿಗೆಯನ್ನು ತಯಾರಿಸಲು ಬೇಕಾಗುವ ಎಲ್ಲ ವಸ್ತುಗಳನ್ನು ಒದಗಿಸಿದ ನಂತರ ಯಮನು ತನ್ನ ಕೋಣದ ಮೇಲೆ ಜೇಡಿ ಮಣ್ಣನ್ನು ಹೊತ್ತು ತಂದನು. ಆಗ ಕುಂಬಾರನನ್ನು ಸೃಷ್ಟಿಸಿ ಆತನಿಂದಲೇ ವಿವಾಹಕ್ಕೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ತಯಾರಿಸಿ ಅವುಗಳನ್ನು ಪೂಜಿಸಿ ವಿವಾಹ ಮಂಟಪಕ್ಕೆ ತಂದರು. ಇವುಗಳನ್ನು ಐರಾಣಿಗಳೆಂದು ಕರೆದರು. ಆದ್ದರಿಂದ ಕುಂಬಾರನು ತಯಾರಿಸಿದ ಐರಾಣಿಗಳನ್ನು ಸಾಕ್ಷಾತ್ ದೇವರ ಸ್ವರೂಪ ಎಂದು ಹೇಳುತ್ತಾರೆ. ಆದ್ದರಿಂದಲೇ ಕುಂಬಾರರನ್ನು ಗಿರಿರಾಜನ ವಂಶಸ್ಥರು ಎಂದು ಹೇಳಲಾದ ಶಾಸನವೊಂದು ಸೊಲ್ಲಾಪುರದಲ್ಲಿ ದೊರೆತಿದೆ. ವಿವಾಹ ಪುರಾಣ ಎಂಬ ಶಾಸನದಲ್ಲಿಯೂ ಇದು ಉಲ್ಲೇಖಿತವಾಗಿದ್ದು ಹಂಪಿಯಲ್ಲಿಯೂ ಕೂಡ ಕೆಲವು ತಾಮ್ರದ ಶಾಸನಗಳಲ್ಲಿ ಈ ಕುರಿತ ಉಲ್ಲೇಖಗಳು ಇವೆ.

ಇಂದಿನ ಬೀದರ ಜಿಲ್ಲೆಯ ಭಾಲ್ಕಿ (ಅಂದಿನ ಭಲ್ಲೂಕಿ) ಯಲ್ಲಿ ನೆಲೆಸಿದ್ದವನು ಕುಂಬಾರ ಗುಂಡಯ್ಯ. ಈತನ ಮಡಿಕೆ ಕುಡಿಕೆಗಳು ಗುಣಮಟ್ಟದಲ್ಲಿ ಅತ್ಯುನ್ನತವಾಗಿದ್ದು ಸುತ್ತಲಿನ ಹತ್ತು ಹಳ್ಳಿಯವರು ಈತನಿಂದಲೇ ಮಡಿಕೆ ಕುಡಿಕೆಗಳನ್ನು ಖರೀದಿಸುತ್ತಿದ್ದರು. ಅಂತೆಯೇ ಊರಿನಲ್ಲಿಯೂ ಕೂಡ ಆತನಿಗೆ ಒಳ್ಳೆಯ ಹೆಸರಿತ್ತು. ಸಮಾಜದ ಗಣ್ಯ ವ್ಯಕ್ತಿಗಳಲ್ಲಿ ಕುಂಬಾರ ಗುಂಡಯ್ಯನು ಒಬ್ಬನಾಗಿದ್ದ. ಅಡುಗೆಗೆ ಬಳಸುವ ಮಡಕೆ ಕುಡಿಕೆಗಳಲ್ಲದೆ, ಸತ್ತಾಗ ಬಳಸುವ ಪ್ರೇತ ಗಡಿಗೆಗಳು, ಮದುವೆಗಳಲ್ಲಿ ಬಳಸುವ ಐರಾಣಿ ಗಡಿಗೆಗಳು, ದೊಡ್ಡ ದೊಡ್ಡ ಹರವಿಗಳು, ದನ ಕರುಗಳು ನೀರು ಕುಡಿಯಲು ಉಪಯೋಗವಾಗುವ ಬಾನಿಗಳು, ಹೆಂಡ ಇಳಿಸುವ ತತ್ರಾಣಿಗಳು, ಹೀಗೆ ಹತ್ತು ಹಲವು ವಿಧದ ಗಡಿಗೆಗಳನ್ನು ಆತ ತಯಾರಿಸುತ್ತಿದ್ದನು. ಹಗಲೆಲ್ಲ ತನ್ನ ಕಾಯಕದಲ್ಲಿ ನಿರತನಾಗಿರುತ್ತಿದ್ದ ಕುಂಬಾರ ಗುಂಡಯ್ಯನು ಸಂಜೆಯಾಗುತ್ತಿದ್ದಂತೆ ತಾನೇ ತಯಾರಿಸಿದ ಘಟವನ್ನು ತಾಳಬದ್ಧವಾಗಿ ಬಾರಿಸುತ್ತಾ ಹಾಡತೊಡಗಿದರೆ ಪುರ ಜನರು ಆತನ ಸುತ್ತಲೂ ನೆರೆಯುತ್ತಿದ್ದರು.

ಹಗಲಿನಲ್ಲಿಯೂ ಕೂಡ ಆತ ಯಾವಾಗಲೂ ಶಿವ ಸ್ಮರಣೆಯನ್ನು ಮಾಡುತ್ತಲೇ ತನ್ನ ಕಾಯಕದಲ್ಲಿ ನಿರತನಾಗಿರುತ್ತಿದ್ದನು. ಒಳ್ಳೆಯ



**ವೀಣಾ ಹೇಮಂತಗೌಡ ಪಾಟೀಲ್, ಮುಂಡರಗಿ**

ಜೇಡಿಮಣ್ಣನ್ನು ಶೇಖರಿಸಿ ಕಸ-ಕಡ್ಡಿಗಳಿಲ್ಲದಂತೆ ಮಣ್ಣನ್ನು ಸ್ವಚ್ಛಗೊಳಿಸುವಾಗ, ಮಣ್ಣಿಗೆ ಸರಿಯಾದ ಪ್ರಮಾಣದ ನೀರನ್ನು ಹಾಕಿ ತುಳಿದು ಹದಗೊಳಿಸುವಾಗ, ತಿಗರಿಯನ್ನು ಜೋರಾಗಿ ತಿರುಗಿಸುತ್ತಾ ಅದರ ಮೇಲೆ ಮಣ್ಣಿನ ಮುದ್ದೆಯನ್ನು ಇಟ್ಟು ಬೇಕಾದ ಆಕಾರಕ್ಕೆ ಮಡಿಕೆ ಕುಡಿಕೆಗಳನ್ನು ತಯಾರಿಸುತ್ತಾ ಹೀಗೆ ಪ್ರತಿಯೊಂದು ಕಾರ್ಯ ಮಾಡುವಾಗಲು ಶಿವ ನಾಮ ಸ್ಮರಣೆ ಮಾಡುತ್ತಲೇ ಇರುತ್ತಿದ್ದನು.

ಇನ್ನು ಆತನ ಪತ್ನಿ ಕೇತಲಾದೇವಿಯು ತಮ್ಮ ಕುಲ ಕಸುಬಾದ ಕುಂಬಾರಿಕೆಯಲ್ಲಿ ಗಂಡನಿಗೆ ಸಹಾಯ ಮಾಡುವುದರ ಜೊತೆ ಜೊತೆಗೆ ಲಿಂಗ ಪೂಜೆಯ ನಂತರ ಶಿವಲಿಂಗವನ್ನು ಕರಡಿಗೆಯಲ್ಲಿ ಇಟ್ಟುಕೊಳ್ಳುವಾಗ ಬಳಸುವ ಚೌಕನೆಯ ವಸ್ತ್ರ ಪಾವಡವನ್ನು ಜನರಿಗೆ ಒದಗಿಸುವ ಕೆಲಸವನ್ನು ಮಾಡುತ್ತಿದ್ದಳು. ಇದು ಆಕೆಯ ನೆಚ್ಚಿನ ಕೆಲಸವಾಗಿತ್ತು ಆಕೆಯು ಹಲವಾರು ವಚನಗಳನ್ನು ರಚಿಸಿದ್ದಾಳೆ. ಉನ್ನತ ವರ್ಗದ ಸೊತ್ತಾಗಿದ್ದ ಸಂಸ್ಕೃತ ಭಾಷೆಯಲ್ಲೂ ಕೂಡ ಆಕೆ ಪರಿಣತಿ ಸಾಧಿಸಿದ್ದಳು ಎಂಬುದನ್ನು ಆಕೆಯ ಒಂದು ವಚನದಲ್ಲಿ ನಾವು ಕಾಣಬಹುದು.

ಒಂದು ಬಾರಿ ಬಸವಣ್ಣನವರು ಲಿಂಗ ಪೂಜೆಯಲ್ಲಿ ನಿರತರಾಗಿದ್ದಾಗ, ಅವರಿಗೆ ಪಾವಡದ ಅವಶ್ಯಕತೆ ಇತ್ತು. ಪಾವಡವನ್ನು ಒದಗಿಸುವಲ್ಲಿ ತಡೆಯಾಗಬಾರದೆಂದು ಕೂಡಲೇ ತನ್ನ ಎದೆಯ ಚರ್ಮದಿಂದ ಕೇತಲಾ ದೇವಿಯು ಪಾವಡವನ್ನು ತಯಾರಿಸಿ ಒದಗಿಸಿದಳು ಎಂದು ಆಕೆಯ ಕುರಿತ ಪವಾಡಗಳು ಇವೆ. ಈಕೆಯು ವಚನಗಳನ್ನು ಕೂಡ ರಚಿಸಿದ್ದಾಳೆ. ಈಕೆಯ ವಚನಗಳ ಅಂಕಿತ ಕುಂಭೇಶ್ವರ ಹದ ಮಣ್ಣಲ್ಲದೆ ಮಡಿಕೆಯಾಗದು ವ್ರತಹೀನನ ಬೆರೆಯಲಾಗದು ಬೆರೆದಡೆ ನರಕ ತಪ್ಪದು ನಾನೊಲ್ಲೆ ಬಲ್ಲೆನಾಗಿ ಕುಂಭೇಶ್ವರ ಎಂದು ವಚನವನ್ನು ರಚಿಸಿರುವ ಕೇತಲೆಯ ಪ್ರಕಾರ ಮಣ್ಣು ಹದವಾಗಿ ಇಲ್ಲದಿದ್ದರೆ ಮಡಿಕೆಯಾಗದು, ವ್ರತದಂತೆ ಕಾಯಕವನ್ನು ಮಾಡದಿರುವ ನೇಮ ನಿಷ್ಠೆಯಿಲ್ಲದ ವ್ಯಕ್ತಿಯೊಂದಿಗೆ ಜೀವನ ನಡೆಸಲಾಗದು, ಹಾಗೆ ನಡೆಸಿದ್ದಾದರೆ ನರಕದಂತಹ ಜೀವನ ಅದಾಗುತ್ತದೆ ಆದ್ದರಿಂದ ಅಂತಹ ಜೀವನ ನನಗೆ ಬೇಡ ಎಂದು ಆಕೆ ಸ್ಥೂಲ ಅರ್ಥದಲ್ಲಿ ಹೇಳಿದ್ದಾಳೆ. ಆದರೆ ಇದನ್ನು ಆಳವಾಗಿ ವಿವೇಚನೆ ಮಾಡಿದರೆ ಈ ದೇಹವೆಂಬ ಮಡಿಕೆಯನ್ನು ಕಾಯಕವೆಂಬ ಹದ ಮಣ್ಣಿನಿಂದ ತಯಾರಿಸಿ ಲಿಂಗ ಪೂಜೆಯೆಂಬ ಬೆಂಕಿಯಲ್ಲಿ ಹದವಾಗಿ ಬೇಯಿಸಿ ಶುದ್ಧವಾಗಿಟ್ಟುಕೊಳ್ಳಬೇಕು ಎಂಬುದು ಆಕೆಯ ವಚನದ ತಾತ್ಪರ್ಯ. ಒಟ್ಟಿನಲ್ಲಿ ಸತಿಪತಿಗಳು ಶರಣ ಧರ್ಮಕ್ಕೆ ಅನುಗುಣವಾಗಿ ಜೀವನ ನಡೆಸುತ್ತಿದ್ದು ಕಾಯಕ ಮತ್ತು ದಾಸೋಹಕ್ಕೆ ಹೆಚ್ಚಿನ ಮಹತ್ವ ನೀಡುತ್ತಿದ್ದರು.

ಒಂದು ದಿನ ಇಳಿ ಹೊತ್ತಿನ ಸಮಯದಲ್ಲಿ ತನ್ನ ಘಟವನ್ನು ಬಾರಿಸುತ್ತಾ ಶಿವನನ್ನು ಕುರಿತು ಸುಶ್ರಾವ್ಯವಾಗಿ ಹಾಡುತ್ತಿದ್ದಾಗ ಕೈಲಾಸದಲ್ಲಿ ಧ್ಯಾನ ನಿರತನಾಗಿದ್ದ ಶಿವ ಎಚ್ಚರಗೊಂಡನು. ಹಾಡಿನ ಮಧುರ ದನಿಯ ಹಿಂದಿನ ಭಕ್ತಿ ಭಾವಕ್ಕೆ ಉಮೆಯ ಸಹಿತ ಶಂಕರನು ಭೂಲೋಕಕ್ಕೆ ಬಂದನು. ಕಣ್ಣು ಮುಚ್ಚಿ ಹಾಡುತ್ತಿದ್ದ ಕುಂಬಾರ ಗುಂಡಯ್ಯನ ತಾಳವಾದ್ಯಕ್ಕೆ ಸಾಕ್ಷಾತ್ ಶಿವನು ಕುಣಿಯಲಾರಂಭಿಸಿದನು. ಎಷ್ಟೋ ಹೊತ್ತಿನ ಬಳಿಕ ಬಾರಿಸುವುದನ್ನು ಮುಗಿಸಿದ ಕುಂಬಾರ ಗುಂಡಯ್ಯ ಕಣ್ತೆರೆದು ನೋಡಿದಾಗ ಎದುರಿಗೆ ಸಾಕ್ಷಾತ್ ಶಿವ!!. ಶಿವನನ್ನು ಕಂಡು ಮೂಕ ವಿಸ್ಮಿತನಾದ ಕುಂಬಾರ ಗುಂಡಯ್ಯ ಭಕ್ತಿಯಿಂದ ತನ್ನೆರಡು ಕೈಗಳನ್ನು ಮುಗಿದು ಶಿವನ ಪಾದಕ್ಕೆರಗಿದನು.ಈ ಘಟನೆಯನ್ನು ನಮ್ಮ ಜನಪದರು ಹೀಗೆ ಹಾಡಿದ್ದಾರೆ ಕುಂಬಾರ ಗುಂಡಯ್ಯ ತುಂಬಿ ತಿಗರಿಗೆ ಕೆಸರ ಶಂಭು ಹರನೆಂದು ತಿರುಗಿಸಲು / ಶಿವ ಕುಣಿದ ಹಂಬಲಿಸಿ ಜಂಗ ಕಟ್ಟಗೊಂಡು ಭಕ್ತ ವತ್ಸಲನಾದ ಶಿವನು ಕುಂಬಾರ ಗುಂಡಯ್ಯನನ್ನು ಕುರಿತು "ಸಾಕು ನಡೆ ನನ್ನೊಂದಿಗೆ ಕೈಲಾಸಕ್ಕೆ ಅಲ್ಲಿಯೇ ಹಾಡುತ್ತಾ ನನ್ನೊಂದಿಗೆ ಇದ್ದುಬಿಡು ಎಂದು ಹೇಳಿದನು. ಅಲ್ಲಿ ಬಂದು ನಾನೇನು ಮಾಡಬೇಕು ಎಂದು ಗುಂಡಯ್ಯನು ವಿನಮ್ರನಾಗಿ ಕೇಳಿದನು. ಅದಕ್ಕುತ್ತರವಾಗಿ ಶಿವನು ಅಲ್ಲಿ ನೀನು ಏನನ್ನು ಮಾಡಬೇಕಾಗಿಲ್ಲ.ಆರಾಮಾಗಿ ದಿನಗಳನ್ನು ಕಳೆಯಬಹುದು ಎಂದನು. ಅದಕ್ಕೆ ಜನಪದ ಭಾಷೆಯಲ್ಲಿ ಉತ್ತರ ಹೀಗಿದೆ ಬೇಡೆನಗೆ ಕೈಲಾಸ ಬಾಡುವುದು ಕಾಯಕವು ನೀಡನಗೆ ಶಿವನೇ ಕಾಯಕವ / ಕುಣಿದಾಡಿ ನಾಡ ಹಂದರಕ್ಕೆ ಹಬ್ಬಿಸುವೆ.

ಕುಂಬಾರ ಗುಂಡಯ್ಯ ನಸುನಕ್ಕು ವಿನೀತನಾಗಿ ಮತ್ತೊಮ್ಮೆ ಕೈ ಮುಗಿದು 'ನಾನು ನಿನ್ನೊಡನೆ ಕೈಲಾಸಕ್ಕೆ ಬಂದರೆ ನನ್ನ ಕಾಯಕ ನಿಂತು ಹೋಗುತ್ತದೆ' ಎಂದು ಹೇಳಿದನು. ಆತನ ಕಾಯಕ ನಿಷ್ಠೆಯನ್ನು ಮೆಚ್ಚಿದ ಶಿವನು ಆತನಿಗೆ ಹರಸಿ ಅಂತರ್ಧಾನನಾದನು.

ಹರಿಹರ ಕವಿಯು ತನ್ನ ಗುಂಡಯ್ಯನ ರಗಳೆಯಲ್ಲಿ ಜಗವೆಲ್ಲ ಆಡಿಸುವ ಶಿವನನ್ನು ಕುಂಬಾರ ಗುಂಡಯ್ಯ ಆಡಿಸಿದ ಎಂದು ಬರೆದಿದ್ದಾನೆ.

ಕುಣಿದಾಡುತ್ತ ಮಡಿಕೆಗಳ ಬಾರಿಸಿ ಕುಣಿದಾಡುತ್ತ ಕುಡಿಕೆಗಳಂ ಬಾರಿಸಿ ಶಿವನು ಶಿವನ ಸುತ್ತಿ ಬರುತ್ತುಂಬಾರಿಸಿ ಕುಣಿಯುತ ಕೊರಲೆತ್ತುತ ನೆರೆ ಕೂಗುತ ತೊನೆಯುತ ತೂಗಾಡುತ ಸುಖಿಯಾಗುತ ಆಡುವ ಗುಂಡಯ್ಯನ ಹೊಸ ನೃತ್ಯವ ನೋಡುವ ಶಿವನಂ ಮುಟ್ಟಿತು ಸತ್ಯಂ ತಾನೇ ತಯಾರಿಸಿದ ಮಡಕೆಗಳನ್ನು ಹದವಾಗಿ ಸುಟ್ಟು ಅವುಗಳು ಸರಿಯಾಗಿವೆಯೇ ಎಂದು ಬಾರಿಸುತ್ತ ಭಕ್ತಿ ಪರವಶತೆಯಲ್ಲಿ ಮಗ್ನನಾಗಿದ್ದ ಕುಂಬಾರ ಗುಂಡಯ್ಯನ ತಾಳಕ್ಕೆ ಸಾಕ್ಷಾತ್ ಪರ ಶಿವನೇ ಕೈಲಾಸದಲ್ಲಿ ನೃತ್ಯ ಮಾಡುವುದನ್ನು ಕಂಡು ಪಾರ್ವತಿ ದೇವಿಯು ಶಿವನನ್ನೇ ಕುಣಿಸುವಂತಹ ಭಕ್ತನದಾರು ತೋರಿಸು ಎಂದು ಕೇಳಿದಾಗ ಶಿವನು ಪಾರ್ವತಿಯನ್ನು ಭೂಲೋಕಕ್ಕೆ ಕುಂಬಾರ ಗುಂಡಯ್ಯನನ್ನು ತೋರಿಸಲು ಕರೆತಂದನೆಂದು ಹರಿಹರನು ತನ್ನ ರಗಳೆಯಲ್ಲಿ ವರ್ಣಿಸಿದ್ದಾನೆ.

ಹೀಗೆ ತಾವು ಶಿವನಲ್ಲಿಟ್ಟಿರುವ ಭಕ್ತಿ ಮತ್ತು ಕಾಯಕದಲ್ಲಿರುವ ನಿಷ್ಠೆಯನ್ನು ಅನೂಚಾನವಾಗಿ ನಡೆಸಿಕೊಂಡು ಬಂದ ಕುಂಬಾರ ಗುಂಡಯ್ಯ ಮತ್ತು ಕೇತಲಾದೇವಿಯವರ ಪಾದಕ್ಕೆ ನಮೋ ನಮಃ

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

### ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com


### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
- ಜಾಹೀರಾತು ವ್ಯವಸ್ಥಾಪಕರು.

## ಅಜ್ಜಿ ಎಂಬ ವಿಜ್ಞಾನಿ

ಹಾಳು ಮುಖದಲ್ಲಿ ಕಸ ಗುಡಿಸಬೇಡ, ತಲೆಗೆ ದಿನಾ ಎಣ್ಣೆ ಹಚ್ಚು, ಮಲಗುವಾಗ ಎಡಕ್ಕೆ ಹೊರಳಿ ಮಲಗು, ಹೊಸ್ತಿಲ ಮೇಲೆ ನಿಲ್ಲಬೇಡ, ರಾತ್ರಿ ಹೊತ್ತು ಉಗುರು ಕತ್ತರಿಸಬೇಡ, ಒಲೆ ಲಕ್ಷ್ಮಿ ಇದ್ದಂಗೆ ದಿನ ಪೂಜೆ ಮಾಡು, ಎಡಗೈಲಿ ಏನೂ ಕೊಡಬೇಡ, ಇಸ್ಕೊಬೇಡ? ಹೀಗೆ ನಮ್ಮಜ್ಜಿ ನಾನು ಏನೇ ಮಾಡುತ್ತಿದ್ದರು ಅದಕ್ಕೆ ಒಂದು ಮಾತು ಸೇರಿಸುತ್ತಾಳೆ. ಇವಳದೇನಪ್ಪಾ ಕಾಟ ಯಾವಾಗಲೂ ಗೊಣಗ್ತಾನೆ ಇರ್ತಾಳೆ ಅಂತ ನಾನು ಸಿಡಿಮಿಡಿಗೊಳ್ಳದ ದಿನಗಳೇ ಇಲ್ಲ. ಮನೆಯಿಂದ ಹೊರ ಹೋಗುವಾಗ ಒಂದು ಮಾತು, ಮನೆ ಒಳಗೆ ಬರೋವಾಗ ಒಂದು ಮಾತು.

ಈ ಮೂಡನಂಬಿಕೆ ಗೊಡ್ಡುನಂಬಿಕೆ ಅಜ್ಜಿಯಿಂದ ನನ್ನೆಲ್ಲಾ ಕೆಲಸಗಳು ನಿಧಾನ ಆಗ್ತವೆ ಅಂತ ನಾನು ಬೇಸರಿಸಿಕೊಳ್ಳದ ದಿನಗಳೇ ಇಲ್ಲ. ಆದರೆ ನಮ್ಮ ಅಪ್ಪ ಅಮ್ಮ ಅವಳ ಮಾತು ತೆಗೆದು ಹಾಕ್ತಾ ಇರಲಿಲ್ಲ. ಆ ಕಾರಣಕ್ಕೆ ನಾನು ಆಕೆ ಹೇಳಿದಂತೆ ಪಾಲಿಸಲೇ ಬೇಕಾಗಿತ್ತು.



**ಸುಜಾತ ಗಿಡ್ಡಪ್ಪಗೌಡ್ರು ಹೊಸಪೇಟೆ**

ಆದರೆ ನಮ್ಮಜ್ಜಿ ಸಾಮಾನ್ಯದವಳಲ್ಲ ಅವಳೊಬ್ಬ ವಿಜ್ಞಾನಿ ಅಂತ ಅರ್ಥ ಆಗಿದ್ದು ನಾನು ವಿಜ್ಞಾನ ಪುಸ್ತಕಗಳನ್ನು ಓದಲು ಶುರು ಮಾಡಿದ ಮೇಲೆಯೇ. ಈ ಕರೋನ ಸಮಯದಲ್ಲಿ ಡಾಕ್ಟರ್ ಹೇಳಿದರಲ್ಲ ಎಸ್‌ಎಂಎಸ್ ಅಂದರೆ ಸ್ಯಾನಿಟೈಜರ್, ಮಾಸ್ಕ್, ಸೋಷಿಯಲ್ ಡಿಸ್ಟೆನ್ಸ್ ಇದ್ರಲ್ಲಿ ನಮ್ಮಜ್ಜಿ ಮಾಸ್ಕ್ ಹಾಕೊಳ್ಳೋಕೆ ಹೇಳುವುದು ಬಿಟ್ಟು ಕೈ ತೊಳೆಯುವುದು, ಯಾರಾದ್ರೂ ಹೊರಗಿಂದ ಬಂದ್ರೆ ಅವರನ್ನ ಓಡಿ ಹೋಗಿ ಮುಟ್ಟೋದು ಮಾಡಬೇಡ ಅಂತ ಮೊದಲಿಂದಾನೂ ಹೇಳ್ತಾನೆ ಇದ್ದಳು. ಆಗೆಲ್ಲ ಅವಳನ್ನು ಬೈದುಕೊಂಡಿದ್ದ ನಾನು ಕರೋನ ಸಮಯದಲ್ಲಿ ಅವಳನ್ನು ನೆನೆಸಿಕೊಂಡೆ.

ವಿಜ್ಞಾನದಲ್ಲಿ ಆರೋಗ್ಯದ ಕುರಿತು ಏನೆಲ್ಲಾ ಇದೆಯೋ ನಮ್ಮಜ್ಜಿ ಅದನ್ನ ನಮಗೆ ಸಂಪ್ರದಾಯ ಅನ್ನೋ ಹೆಸರಿನಲ್ಲಿ ಹೇಳಿದ್ದಳು. ಆಹಾರದ ವಿಷಯಕ್ಕೆ ಬಂದರೆ ನಮ್ಮ ಮನೆಯಲ್ಲಿ ಜೋಳದ ನುಚ್ಚಿನ ಅಂಬಲಿ, ಜೋಳದ ರೊಟ್ಟಿ ಹೆಚ್ಚಾಗಿ ಬಳಸುತ್ತಿದ್ದೆವು. ಇದರಿಂದ ನಮ್ಮ ದೇಹದಲ್ಲಿ ಕೊಬ್ಬು ಬೆಳೆಯಲ್ಲ ಅನ್ನೋದು ನನಗೆ ಗೊತ್ತೇ ಇರದೇ ಇದ್ದರೂ ಸುಮ್ಮನೆ ಮನೆಯಲ್ಲಿ ಮಾಡಿದರಲ್ಲ ಅಂತ ತಿಂತಾ ಇದ್ವಿ. ಅಮಾವಾಸ್ಯೆಗಳಿಗೆ, ಹುಣ್ಣಿಮೆಗಳಿಗೆ, ಹಬ್ಬಗಳಿಗೆ ಬೆಲ್ಲದಿಂದ ಮಾಡಿದ ಸಿಹಿ ಪದಾರ್ಥಗಳನ್ನೇ ಮಾಡಬೇಕು ಎಂಬ ಕಟ್ಟುನಿಟ್ಟಿನ ಸಂಪ್ರದಾಯದಿಂದ ನಮಗೆ ಬೇಕಾದ ಕಬ್ಬಿಣ ಅಂಶವನ್ನು ಅಜ್ಜಿ ದೊರಕಿಸಿ ಕೊಡುತ್ತಿದ್ದಳು.

ಮಲಗುವಾಗ ಎಡಕ್ಕೆ ಹೊರಳಿ ಮಲಗಿದ್ರೆ ಬೇಗ ನಿದ್ದೆ ಬರುತ್ತೆ ಅಂತ ನಮ್ಮಜ್ಜಿ ಹೇಳ್ತಾ ಇದ್ದದ್ದಕ್ಕೆ ವೈಜ್ಞಾನಿಕ ಕಾರಣ ಏನು ಅಂದ್ರೆ ನಮ್ಮ ದೇಹದ ಎಡಭಾಗಕ್ಕೆ ಇರುವ ಜಠರದಲ್ಲಿ ಶೇಖರವಾದ ಆಹಾರ ಸರಿಯಾದ ರೀತಿಯಲ್ಲಿ ಪಚನ ಆಗಬೇಕು ಅಂತ.

ಆಮೇಲೆ ನಮ್ಮಜ್ಜಿ ಇನ್ನೊಂದು ಮಾತು ಹೇಳುತ್ತಿದ್ದರು ಊಟ ಆದ ತಕ್ಷಣ ಮುಂಬಾಗಿಲು ದಾಟಿ ಬಂದು ಆಮೇಲೆ ಮಲಗಬೇಕು ಅಂತ. ನಾವೆಲ್ಲ ಊಟ ಆದ ತಕ್ಷಣ ಹಾಸಿಗೆ ಮೇಲೆ ದೊಪ್ಪೆಂದು ಬಿದ್ದರೆ ಅಜ್ಜಿಯ ಭಯಕ್ಕೆ ಮತ್ತೆ ಎದ್ದು ಮುಂಬಾಗಿಲು ದಾಟಿ ಬರುತ್ತಿದ್ದೆವು. ಆದರೆ ಇದರ ಹಿಂದೆ ಊಟದ ನಂತರ ಸ್ವಲ್ಪ ನಡೆಯಬೇಕು ಎಂಬ ವೈಜ್ಞಾನಿಕ ಕಾರಣ ಆಗ ನನಗೆ ತಿಳಿದಿರಲಿಲ್ಲ. ನಮ್ಮ ಮನೆಗಳು ದೊಡ್ಡವಿದ್ದು ಮುಂಬಾಗಿಲು ಅಡುಗೆ ಮನೆಯಿಂದ ದೂರವೇ ಇತ್ತು.

ಯಾವುದಾದರೂ ವಸ್ತು ಸಿಗದೇ ಹೋದರೆ ಎಡಗೈಲಿ ಇಟ್ಟೇಯಾ ಅನ್ನುತ್ತೆ ಅದಕ್ಕೆ ಸಿಕ್ತಾ ಇಲ್ಲ. ಏನಾದ್ರೂ ಇಸ್ಕೋಳ್ಳುವಾಗ, ಕೊಡೋವಾಗ ಎಡಗೈ ಉಪಯೋಗಿಸಬೇಡ ಅಂತ ಹೇಳಿದ ಅಜ್ಜಿಗೆ ನಮ್ಮ ಬಲಗೈ ಮೆದುಳಿನ ಎಡಭಾಗಕ್ಕೆ ಕನೆಕ್ಟ್ ಆಗಿದ್ದು ನೆನಪಿನ ಶಕ್ತಿ ಅಲ್ಲಿ ಇರುತ್ತೆ ಅದಕ್ಕೆ ಬಲಗೈ ಉಪಯೋಗಿಸಬೇಕು ಅಂತ ಹೇಗೆ ಗೊತ್ತಿತ್ತು ನಾಕಾಣೆ.



ಸಂಪ್ರದಾಯ ಆಚರಣೆ ಅಂತಾನೋ ಅಜ್ಜಿ ಹೇಳಿದಳಲ್ಲ ಅಂತಾನೋ ನಾವು ಪಾಲಿಸುವ ಎಷ್ಟೋ ವಿಷಯಗಳಿಗೆ ವೈಜ್ಞಾನಿಕ ಕಾರಣ ಹುಡುಕಿದಾಗ ನನಗೆ ನಮ್ಮಜ್ಜಿ ಒಬ್ಬ ದೊಡ್ಡ ವಿಜ್ಞಾನಿಯಂತೆ ಕಂಡಳು. ಅವಳು ಹೇಳಿದ ಎಷ್ಟೋ ವಿಷಯಗಳು ಸಾರ್ವಕಾಲಿಕ ಸತ್ಯಗಳು. ಆಧುನಿಕ ಜಗತ್ತಿನ ಆಡಂಬರದ ಜೀವನ ಶೈಲಿ ಅನುಸರಿಸುತ್ತಿರುವ ನಾವುಗಳು ನಮ್ಮ ಹಿರಿಯರು ನಡೆಸಿಕೊಂಡು ಬಂದ ಕೆಲವು ಆಚರಣೆಗಳನ್ನು ಮುಂದುವರೆಸಿದರೆ ನಮಗೇ ಒಳಿತಾಗುವುದು ನಿಶ್ಚಿತ...... ಇದನ್ನು ಓದಿದ ಮೇಲೆ ನಿಮಗೂ ನಿಮ್ಮ ಅಜ್ಜಿ ವಿಜ್ಞಾನಿ ಅಂತ ಅನ್ನಿಸ್ತಾ ಇದೆಯಾ.....

ಹಂಪಿ ಟೈಮ್ಸ್
HAMPI TIMES

ಶುಕ್ರವಾರ / Friday 24.11.2023



# ಜಿಪಂ ಅಡಿ ಪಿಯು ಕಾಲೇಜುಗಳನ್ನು ತರುವ ಆದೇಶ ಹಿಂಪಡೆಯಲು ಉಪನ್ಯಾಸಕರ ಒತ್ತಾಯ







**■ ಹಂಪಿ ಟೈಮ್ಸ್ ಹೊಸಪೇಟೆ**

ಪದವಿ ಪೂರ್ವ ಶಿಕ್ಷಣವನ್ನು ಜಿಲ್ಲಾ ಪಂಚಾಯಿತಿಯ ಅಡಿಯಲ್ಲಿ ತರಲು ಇತ್ತೀಚೆಗೆ ಕರ್ನಾಟಕ ರಾಜ್ಯ ಸರ್ಕಾರವು ಹೊರಡಿಸಿದ ಆದೇಶ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಮಾರಕವಾಗಿದೆ, ಇದನ್ನು ರಾಜ್ಯ ಸರ್ಕಾರವು ಹಿಂಪಡೆಯಬೇಕೆಂದು ವಿಜಯನಗರ ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರ ಸಂಘದ ಅಧ್ಯಕ್ಷ ನಾಗರಾಜ್ ಹವಾಲ್ದಾರ್ ತಿಳಿಸಿದರು. ಅವರು ವಿಜಯನಗರ ಜಿಲ್ಲೆಯ ಎಲ್ಲಾ ಉಪನ್ಯಾಸಕರು ಹಾಗೂ ಪ್ರಾಚಾರ್ಯರೊಂದಿಗೆ ಜಿಲ್ಲಾಧಿಕಾರಿಗಳಿಗೆ ಗುರುವಾರ ಮನವಿ ಪತ್ರ ಸಲ್ಲಿಸಿ ಮಾತನಾಡಿದರು.

ಹಿಂದಿನ ಮುಖ್ಯಮಂತ್ರಿ ಬಂಗಾರಪ್ಪ ಹಾಗೂ ಆಗಿನ ಶಿಕ್ಷಣ ಸಚಿವರಾಗಿದ್ದ ವೀರಪ್ಪ ಮೊಯ್ಲಿ ಇವರು ಪದವಿ ಪೂರ್ವ ಶಿಕ್ಷಣ ಇಲಾಖೆಯನ್ನು ಸೃಜಿಸಿ ಇಡೀ ದೇಶದಲ್ಲಿಯೇ ಮಾದರಿಯಾದ ವ್ಯವಸ್ಥೆಯನ್ನು ರೂಪಿಸಿದ್ದರು. ಇದರ ಪರಿಣಾಮದಿಂದ ಇಡೀ ದೇಶದಲ್ಲಿ ಕರ್ನಾಟಕ ರಾಜ್ಯದ ಪದವಿ ಪೂರ್ವ ಶಿಕ್ಷಣ ಹಾಗೂ ಸಿ.ಇ.ಟಿ. ಪರೀಕ್ಷೆಗಳು ಮಾದರಿಯಾಗಿವೆ. ಇತರ ರಾಜ್ಯಗಳು ನಮ್ಮ ಪದವಿ ಪೂರ್ವ ಶಿಕ್ಷಣ ವ್ಯವಸ್ಥೆಯಿಂದ ಪ್ರಭಾವಿತರಾಗಿ ಇದರಮಾದರಿಯನ್ನುಅನುಸರಿಸುತ್ತಿದ್ದಾರೆ. ಆದರೆ ಪ್ರಸ್ತುತ ಕರ್ನಾಟಕ ಸರ್ಕಾರವು ಇತ್ತೀಚಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಡಿಯಲ್ಲಿ ತರುವ ಆದೇಶವನ್ನು ಹೊರಡಿಸಿರುವುದು ಅವೈಜ್ಞಾನಿಕವಾಗಿದೆ.

ಐ.ಎ.ಎಸ್. ಅಧಿಕಾರಿಗಳು ಇಲಾಖೆಯ ನಿರ್ದೇಶಕರಾಗಿದ್ದು, ಜಿಲ್ಲೆಯ ಆಡಳಿತವನ್ನು ಆಯಾ ಜಿಲ್ಲೆಯ ಉಪನಿರ್ದೇಶಕರು ಸಮರ್ಪಕವಾಗಿ ನಿರ್ವಹಿಸುತ್ತಿದ್ದಾರೆ. ಪದವಿ ಪೂರ್ವ ಶಿಕ್ಷಣದ ಬೋಧನೆ, ಪರೀಕ್ಷೆ ಹಾಗೂ ಮೌಲ್ಯಮಾಪನವನ್ನು ಅತ್ಯಂತ ಕಟ್ಟುನಿಟ್ಟಾಗಿ ನಡೆಸಲಾಗುತ್ತಿದೆ. ಆದರೆ ಮಾಜಿ ಮುಖ್ಯಮಂತ್ರಿ ಬಂಗಾರಪ್ಪನವರು ರೂಪಿಸಿದ ಈ ವ್ಯವಸ್ಥೆಯನ್ನು ಅವರ ಪುತ್ರ ಶಿಕ್ಷಣ ಸಚಿವ ಮಧು ಬಂಗಾರಪ್ಪನವರು ಈ ಅದೇಶದ ಮೂಲಕ ದುರ್ಬಲಗೊಳಸುತ್ತಿದ್ದಾರೆ ಎಂದರು.

ಇದಕ್ಕೂ ಮೊದಲು ವಿಜಯನಗರ ಜಿಲ್ಲೆಯ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರು ಹಾಗೂ ಉಪನ್ಯಾಸಕರು ಸಾಯಿಬಾಬಾ ವೃತ್ತದಿಂದ ಜಿಲ್ಲಾಧಿಕಾರಿಗಳ ಕಛೇರಿಯವರೆಗೆ ಮೌನ ಮೆರವಣಿಗೆಯಲ್ಲಿ ಸಾಗಿದ ನಂತರ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು. ಪ್ರಾಚಾರ್ಯರ ಸಂಘದ ಕಾರ್ಯದರ್ಶಿ ಅರವಿಂದ ಕುಲಕರ್ಣಿ, ಖಜಾಂಜಿ ಹೆಚ್.ಎಂ.ನಿರಂಜನ, ಉಪಾಧ್ಯಕ್ಷ ಎಂ.ಎಫ್.ಹುಗ್ಗಿ, ನಾಗಲಿಂಗಸ್ವಾಮಿ, ಹಾಲೇಶ್, ಕರ್ನಾಟಕ ರಾಜ್ಯ ಪದವಿ ಪೂರ್ವ ಉಪನ್ಯಾಸಕರ ಸಂಘದ ಹೊಸಪೇಟೆ ತಾಲೂಕು ಅಧ್ಯಕ್ಷ ಡಾ.ದಯಾನಂದ ಕಿನ್ನಾಳ್, ಹ.ಬೊ.ಹಳ್ಳಿ ತಾಲೂಕು ಅಧ್ಯಕ್ಷ ಗೂಳೆಪ್ಪ, ಡಾ.ಸಮದ್ ಕೊಟ್ಟೂರು, ಸುಧಾ ಚಿದಾನಂದಗೌಡ ಹಾಗೂ ನೂರಾರು ಉಪನ್ಯಾಸಕರು ಭಾಗವಹಿಸಿದ್ದರು.

# ಅರ್ಹತೆ ಇದ್ದರೂ ಕನಿಷ್ಠ ವೇತನ

## ಹೊಸಪೇಟೆ ಶಂಕರ್ ಆನಂದಸಿಂಗ್ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರು ತರಗತಿ ಬಹಿಷ್ಕರಿಸಿ ಪ್ರತಿಭಟನೆ

**■ ಹಂಪಿ ಟೈಮ್ಸ್ ಹೊಸಪೇಟೆ**

ವಿವಿಧ ಬೇಡಿಕೆ ಈಡೇರಿಸುವಂತೆ ಅತಿಥಿ ಉಪನ್ಯಾಸಕರು ತರಗತಿ ಬಹಿಷ್ಕರಿಸಿ ಧರಣಿ ಹಮ್ಮಿಕೊಂಡಿದ್ದರು.

ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದ ನೇತೃತ್ವದಲ್ಲಿ ಹೊಸಪೇಟೆಯ ಶ್ರೀ ಶಂಕರ್ ಆನಂದಸಿಂಗ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರತಿಭಟನೆ ನಡೆಸಿದರು.

ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ, 12 ತಿಂಗಳ ವೇತನ, ಸಂಬಳ ಸಹಿತ ರಜೆ ಸೇರಿದಂತೆ ಮತ್ತಿತರ ಬೇಡಿಕೆಗಳನ್ನು ಈಡೇರಿಸಬೇಕೆಂದು




ಒತ್ತಾಯಿಸಿದರು. ಸಾವಿರಾರು ಸಂಖ್ಯೆಯ ಅತಿಥಿ ಉಪನ್ಯಾಸಕರು ಪಿಹೆಚ್ಡಿ ನೆಟ್ ಸ್ಲೆಟ್ ಅರ್ಹತೆ ಹೊಂದಿದ್ದರೂ ಸಹ ಸುಮಾರು 15 16 ವರ್ಷಗಳಿಂದ ಕನಿಷ್ಠ ಸಂಬಳಕ್ಕೆ ದುಡಿಯುತ್ತಿದ್ದರೂ ಸಹ ಅವರಿಗೆ ವೃತ್ತಿಭದ್ರತೆಯ ಆತಂಕ ಇರುವುದರಿಂದ ಎಲ್ಲರಿಗೂ ಸೇವಾ ಭದ್ರತೆಯನ್ನು ಒದಗಿಸಬೇಕೆಂದು ಸರ್ಕಾರಕ್ಕೆ ಅತಿಥಿ ಉಪನ್ಯಾಸಕರು ಒತ್ತಾಯಿಸಿದರು.

ಡಿಗ್ರಿ ಕಾಲೇಜುಗಳಲ್ಲಿ ಜೀತದಾಳುಗಳಂತೆ ಕಾರ್ಯ ನಿರ್ವಹಿಸುತ್ತಿದ್ದು, ಖಾಯಂ ಅಧ್ಯಾಪಕರ ಸರಿಸಮನಾಗಿ ಕಾರ್ಯನಿರ್ವಹಿಸುತ್ತಿದ್ದರೂ ಕನಿಷ್ಠ ವೇತನಕ್ಕಾಗಿ ದುಡಿಯುತ್ತಿದ್ದೇವೆ. ಸರ್ಕಾರ ನೀಡಿದ ಸಂಬಳ ಸಾಕಾಗುತ್ತಿಲ್ಲ. ಕುಟುಂಬ ನಿರ್ವಹಣೆ ಮಾಡಲು ವೇತನ ಸಾಲುತ್ತಿಲ್ಲ ಎಂದು ನೊಂದ ಅತಿಥಿ ಉಪನ್ಯಾಸಕರು ತಿಳಿಸಿದರು. ಈ ಸಂದರ್ಭದಲ್ಲಿ ಎಲ್ಲಾ ವಿಭಾಗ ಅತಿಥಿ ಉಪನ್ಯಾಸಕರು ಇದ್ದರು.

# ನೇಕಾರರಿಂದ ಅರ್ಜಿ ಆಹ್ವಾನ

**■ ಹಂಪಿ ಟೈಮ್ಸ್ ಕೊಪ್ಪಳ:**

2023–24ನೇ ಸಾಲಿಗಾಗಿ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯ 2 ವಿದ್ಯುತ್‌ಮಗ್ಗ ಯೋಜನೆಯಡಿ ವಿದ್ಯುತ್ ಮಗ್ಗ ಚಟುವಟಿಕೆ ಕೈಗೊಳ್ಳುವ ಉದ್ದೇಶವಿರುವ ಫಲಾನುಭ ವಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಘಟಕ ವೆಚ್ಚ ರೂ. 3,50,000/– ಲಕ್ಷಗಳಾಗಿದ್ದು, ಈ ಮೊತ್ತವನ್ನು ಹಣಕಾಸು ಸಂಸ್ಥೆಗಳಿಂದ (ಬ್ಯಾಂಕ್) ಸಾಲ ಪಡೆದು ಯಂತ್ರೋಪಕರಣಗಳನ್ನು ಅಳವಡಿಸಿ ಉತ್ಪಾದನೆ ಪ್ರಾರಂಭಿಸಿದ ನಂತರ ಅರ್ಜಿ ಸಲ್ಲಿಸಬಹುದಾಗಿದೆ.

ಸಾಮಾನ್ಯ ವರ್ಗದವರಿಗೆ ಶೇ.50 ರಷ್ಟು ಹಾಗೂ ಪರಿಶಿಷ್ಟ ಜಾತಿ/ಪಂಗಡದವರಿಗೆ ಶೇ.90 ರಷ್ಟು ಸಹಾಯಧನವನ್ನು ಸಂಬಂಧಪಟ್ಟ ಸಾಲ ನೀಡಿದ ಬ್ಯಾಂಕುಗಳಿಗೆ ಆರ್.ಟಿ.ಜಿ.ಎಸ್ ಮೂಲಕ ಜಮಾ ಮಾಡಲಾಗುವುದು. ವಿದ್ಯುತ್ ಮಗ್ಗ ಚಟುವಟಿಕೆ ನಡೆಸಲು ಆಸಕ್ತಿವುಳ್ಳ ಅರ್ಹ ಫಲಾನುಭವಿಗಳು ಈ ಯೋಜನೆಯ ಲಾಭ ಪಡೆದುಕೊಳ್ಳಲು ಕೋರ ಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಖ್ಯೆ: 08539–295469ಯನ್ನು ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ನ್ಯಾ. ಎ ಜೆ ಸದಾಶಿವ ಆಯೋಗದ ವರದಿ ಯಥಾವತ್ ಜಾರಿಗೆ ಒತ್ತಾಯ



**■ ಹಂಪಿ ಟೈಮ್ಸ್ ಹರಪನಹಳ್ಳಿ**

ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ ನ್ಯಾಯಮೂರ್ತಿ ಎ ಜೆ ಸದಾಶಿವ ಆಯೋಗದ ವರದಿ ಯಥಾವತ್ ಜಾರಿಗೆ ಒತ್ತಾಯಿಸಿ ಶಾಸಕಿ ಎಂ.ಪಿ. ಲತಾ ಅವರಿಗೆ ಮಾದಿಗ ಸಮಾಜದಿಂದ ಮನವಿ ಸಲ್ಲಿಸಲಾಯಿತು.

ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಮಾದಿಗ ಮತ್ತು ಚಲವಾದಿ ಸಮುದಾಯಗಳು ಸಾಮಾಜಿಕ ಆರ್ಥಿಕ ರಾಜಕೀಯ ಶೈಕ್ಷಣಿಕ ಕ್ಷೇತ್ರದಲ್ಲಿ ಅವಕಾಶ ವಂಚಿತರಾಗಿದ್ದು ಇವರಿಗೆ ಸಾಮಾಜಿಕ ನ್ಯಾಯದಡಿಯಲ್ಲಿ ಮತ್ತು ಪರಿಶಿಷ್ಟ ಜಾತಿಯ 101 ಜಾತಿಯಲ್ಲಿ ಪ್ರತ್ಯೇಕವಾಗಿ ಒಳ ಮೀಸಲಾತಿ ನೀಡಬೇಕೆಂದು ಸುಮಾರು 30 ವರ್ಷಗಳಿಂದ ಮಾದಿಗ ಮತ್ತು ಛಲವಾದಿ ಸಮುದಾಯಗಳು ಹೋರಾಟ ಮಾಡುತ್ತಾ ಬಂದಿದ್ದು ಈ ಸಂಬಂಧ ನಿವೃತ್ತ ನಾಯಮೂರ್ತಿ ಎಜಿ ಸದಾಶಿವ ಆಯೋಗ ನೇಮಕ ಮಾಡಿ ರಾಜ್ಯದ್ಯಂತ ಸರ್ವೆ ಮಾಡಿ ಮಾದಿಗ ಮತ್ತು ಚಲವಾದಿ ಸಮುದಾಯಗಳು ಸಾಮಾಜಿಕ ಆರ್ಥಿಕ ಶೈಕ್ಷಣಿಕವಾಗಿ ಭಾರಿ ಹಿಂದುಳಿದಿದ್ದು ಇವರಿಗೆ ಒಳ ಮೀಸಲಾತಿ ನೀಡಬೇಕೆಂದು ಸದಾಶಿವ ಆಯೋಗ ಶಿಫಾರಸ್ಸು ಮಾಡಿದೆ

ಆದರೆ ಆಯೋಗದ ವರದಿ ಪ್ರಕಾರ ಒಳ ಮೀಸಲಾತಿ ಜಾರಿ ಮಾಡುತ್ತಿಲ್ಲ ಆದ್ದರಿಂದ ಕರ್ನಾಟಕದ ರಾಜ್ಯಾದ್ಯಂತ ಸದಾಶಿವ ಆಯೋಗದ ವರದಿ ಪ್ರಕಾರ ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ತಾಲುಕಿನ ಮಾದಿಗ ಸಮಾಜ ಹಲಗಿ ವಾದ್ಯದೊಂದಿಗೆ ಮೆರವಣಿಗೆ ಮುಖಾಂತರ ಕ್ಷೇತ್ರದ ಶಾಸಕರ ಮನವಿ ಪತ್ರ ಸಲ್ಲಿಸಲಾಯಿತು.

ಮುಖ್ಯಮಂತ್ರಿಗಳಾದ ತಾವುಗಳು ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ ಮಾದಿಗ ಅಂಡ್ ಛಲವಾದಿ ಸಂಬಂಧಿತ ಜಾತಿಗಳಿಗೆ ಒಳ ಮೀಸಲಾತಿ ಜಾರಿ ಮಾಡಲು ಶಾಸಕರಾ ಮುಖಾಂತರ ನ್ಯಾಯ ಮೂರ್ತಿ ಏಜಿ ಸದಾಶಿವ ಆಯೋಗದ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸಬೇಕೆಂದು ತಾಲೂಕು ಮಾದಿಗ ಸಮಾಜದ ಎಲ್ಲಾ ಬಂಧುಗಳು ಮತ್ತು ಚಲವಾದಿ ಸಮಾಜದ ಎಲ್ಲಾ ಬಾಂಧವರು ಈ ಮೂಲಕ ತಮ್ಮಲ್ಲಿ ಆಗ್ರಹಿಸಿದ್ದಾರೆ

ಈ ಸಂದರ್ಭದಲ್ಲಿ ನಿಚ್ಚವನಹಳ್ಳಿ ಭೀಮಪ್ಪ. ಗುಂಡುಗತ್ತಿ ಕೊಟ್ರಪ್ಪ. ಜಟ್ಟೆಪ್ಪ. ಬಿ ಮಹೇಂದ್ರ ಕುಮಾರ್. ಜಿಲ್ಲಾ ಡಿಎಸ್‌ಎಸ್ ಸಂಚಾಲಕ ಸವಣೂರು ಯಲ್ಲಪ್ಪ. ಮಾಳಗಿ ರಮೇಶ್. ಪತ್ರಕರ್ತ ಬಸವರಾಜ್ ದೊಡ್ಮನಿ. ಪುಣಭಘಟ್ಟಿ ನಿಂಗಪ್ಪ. ಗೌರಿ ಹಳ್ಳಿ ಮಂಜುನಾಥ್. ಕಬ್ಬಳ್ಳಿ ಪರಸಪ್ಪ. ಹುಲಿಕಟ್ಟಿ ಚಂದ್ರಪ್ಪ. ಓ ರಾಮಪ್ಪ ಅರಸೀಕೆರೆ ಮರಿಯಪ್ಪ. ಮೈದೂರು ರಾಮಣ್ಣ. ಕುಂಚೂರು ಸಂಜೀವಪ್ಪ. ಎಂ ಸುಭಾಷ್. ಕಬ್ಬಳ್ಳಿ ಮೈಲಪ್ಪ. ಪೂಜಾರ್ ನವೀನ್ ಇತರರಿದ್ದರು.

## ಜಿಲ್ಲಾ ಮಟ್ಟದ ಪದವಿಪೂರ್ವ ಕಾಲೇಜುಗಳ ವಿವಿಧ ಸಾಂಸ್ಕೃತಿಕ ಸ್ಪರ್ಧೆ

# ಟಿಎಂಎಇಎಸ್ ಅಕಾಡೆಮಿ ಪಿಯು ಕಾಲೇಜು ವಿದ್ಯಾರ್ಥಿಗಳ ಸಾಧನೆ



**■ ಹಂಪಿ ಟೈಮ್ಸ್ ಹೊಸಪೇಟೆ**

ನಗರದ ವಿಜ್ಞಾನ ಕಾಲೇಜಿನಲ್ಲಿ ದಿನಾಂಕ 22–11–2023 ರಂದು ನಡೆದ ವಿಜಯನಗರ ಜಿಲ್ಲಾ ಮಟ್ಟದ ಪದವಿಪೂರ್ವ ಕಾಲೇಜುಗಳ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಟಿಎಂಎಇಎಸ್ ಅಕಾಡೆಮಿ ಆಫ್ ಸೈನ್ಸ್ ಅಂಡ್ ಕಾಮರ್ಸ್ ಪಿಯು ಕಾಲೇಜಿನ ವಿದ್ಯಾರ್ಥಿಗಳು ಅಪರೂಪದ ಸಾಧನೆ ಮೆರೆದು ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾರೆ.

ಕನ್ನಡ ಚರ್ಚಾಸ್ಪರ್ಧೆಯಲ್ಲಿ ಕುಮಾರಿ ರಮ್ಯ. ಬಿ. ಪ್ರಥಮ ಬಹುಮಾನ ಪಡೆದುಕೊಂಡಿದ್ದಾಳೆ. ಇಂಗ್ಲಿಷ್ ಪ್ರಬಂಧ ರಚನೆಯಲ್ಲಿ ಪ್ರಥಮ ಪಿಯು ವಿದ್ಯಾರ್ಥಿ ಕುಮಾರ್ ವಿಶ್ವನಾಥ್, ದ್ವಿತೀಯ ಪಿಯು ವಿದ್ಯಾರ್ಥಿ ಕುಮಾರಿ ಸುದೇಷ್ಣಾ ಸಿಂಗ್ ಪ್ರಥಮ ಬಹುಮಾನ ಗಳಿಸಿದ್ದಾರೆ. ಇಂಗ್ಲಿಷ್ ವಿಭಾಗದ ಚರ್ಚಾಸ್ಪರ್ಧೆಯಲ್ಲಿ ಕುಮಾರಿ ಅಕ್ಷಾ ಕೆ.ಆರ್ ದ್ವಿತೀಯ, ಭಕ್ತಿಗೀತೆ ಸ್ಪರ್ಧೆಯಲ್ಲಿ ಕುಮಾರ್ ಅಪ್ರಮೇಯ್ ಪ್ರಥಮ, ಕುಮಾರ್ ನಿನಾದ್ ಎಂ. ದ್ವಿತೀಯ ಬಹುಮಾನ ತಮ್ಮದನ್ನಾಗಿಸಿಕೊಂಡಿದ್ದಾರೆ.

ಭಾವಗೀತೆ ಸ್ಪರ್ಧೆಯಲ್ಲಿ ಕುಮಾರಿ ಅನುಶ್ರೀ ದ್ವಿತೀಯ, ಕುಮಾರ್ ಸಾಹಿಲ್ ತೃತೀಯ ಹಾಗೂ ಜನಪದ ಗೀತೆ ಸ್ಪರ್ಧೆಯಲ್ಲಿ ಕುಮಾರಿ ಮಮತಾ ಜಿ. ದ್ವಿತೀಯ ಬಹುಮಾನಗಳನ್ನು ಪಡೆದುಕೊಂಡು ವಿಶೇಷ ಸಾಧನೆ ಮೆರೆದಿದ್ದಾರೆ.

ಹರಪನಹಳ್ಳಿ ತೆಗ್ಗಿನಮಠದ ಅಧ್ಯಕ್ಷರಾದ ಷ.ಬ್ರ. ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿಯವರು, ಟಿಎಂಎಇ ಸಂಸ್ಥೆಯ ಉಪ ಕಾರ್ಯದರ್ಶಿಗಳೂ ಹಾಗೂ ಕಾಲೇಜಿನ ಸ್ಥಾಪಕರೂ ಆದ ಟಿ.ಎಂ. ವಿಜಯಕುಮಾರ್, ಸಂಸ್ಥೆಯ ಅಧ್ಯಕ್ಷರಾದ ಎಂ.ಕೆ.ರವೀಂದ್ರ, ಆಡಳಿತ ಮಂಡಳಿಯ ನಿರ್ದೇಶಕರಾದ ಟಿ.ಎಂ. ಚಂದ್ರಶೇಖರ್, ಕಾಲೇಜಿನ ಪ್ರಾಚಾರ್ಯರಾದ ಪ್ರೊ. ವಿ.ಎಸ್. ದಯಾನಂದ ಕುಮಾರ್, ಶೈಕ್ಷಣಿಕ ವಿಭಾಗದ ಮುಖ್ಯಸ್ಥರಾದ ಪಿ.ವಿ.ಶೇಷಸಾಯಿ ಅವರು ಸೇರಿದಂತೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರು ಜಿಲ್ಲಾ ಮಟ್ಟದ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ಪ್ರತಿಭಾನ್ವಿತ ವಿದ್ಯಾರ್ಥಿಗಳ ಸಾಧನೆಗೆ ಹರ್ಷ ವ್ಯಕ್ತಪಡಿಸಿದ್ದಾರೆ.

ಕವಿ ಮನಸು

## ತುಳಸಿ ವಿವಾಹ



ರಾಕ್ಷಸ ಜಲಂಧರನ ಪತ್ನಿ ತುಳಸಿ
ನಿನ್ನಯ ಭಕ್ತಿ ಪತಿಯನು ಉಳಿಸಿ
ಇಂದ್ರಾದಿ ದೇವತೆಗಳ ನಿದ್ರೆಗೆಡಿಸಿ
ಬರುವಂತಾಯಿತು ವಿಷ್ಣು ಗಡಬಡಿಸಿ

ಪತಿಯ ವೇಶದಲ್ಲಿ ವಿಷ್ಣುವ ನೋಡಿ
ಪೂಜೆಯ ಬಿಟ್ಟು ಬಂದೆ ನೀನೋಡಿ
ಯೋಗ ಕ್ಷೇಮ ಉಪಚಾರವ ನೀಡಿ
ಅರಿಯದೆ ದೇವನ ಸಹವಾಸ ಮಾಡಿ

ನೀ ಮೈ ಮರೆದಾಗ ಜಲಂಧರನ ಸಾವು
ನಿಜವರಿತು ವಿಷ್ಣುವಿಗೆ ಶಾಪದ ಕಾವು
ಹರನಾದನು ವಿಷ್ಣು ಸಾಲಿಗ್ರಾಮದ ಶಿಲೆ
ಗಂಡಕಿಯಾಗಿ ಹರಿದ ನೀ ಪಾವನ ಸಲಿಲೆ

ನಿನ್ನ ಭಕ್ತಿಯ ಲೋಕ ಕೊಂಡಾಡಿದೆ
ಮನೆ ಮನೆಗಳಲ್ಲಿ ನಿನ್ನ ಪೂಜಿಸಿದೆ
ನೀನಿರುವ ಪ್ರತಿ ಮನೆಯು ಬೃಂದಾವನ
ತುಳಸಿ ವಿವಾಹಗೈದರೆ ಜೀವನವೇ ಪಾವನ


। ವೀಣಾ ಹೇಮಂತ್ ಗೌಡ ಪಾಟೀಲ್
ಮುಂಡರಗಿ ಗದಗ್

ಸುದ್ದಿ & ಜಾಹೀರಾತಿಗಾಗಿ ಸಂಪರ್ಕಿಸಿ
---------
ಹಂಪಿ ಟೈಮ್ಸ್
9448633038

Digital PHOTOGRAPHY SERVICE
"CAPTURE YOUR PERFECT MOMENT"
WEDDING SHOOTING
FASHION SHOOTING
EVENT COVERAGE
BOOK NOW
9632121359

ಹಂಪಿ ಟೈಮ್ಸ್ ಚಾನಲ್
FREE! hampitimes epaper
SCAN QR CODE TO JOIN FOLLOW
HAMPI TIMES
whatsapp channel

## ತುಂಗಭದ್ರಾ ನೀರಿನ ಮಟ್ಟ



ಗುರುವಾರ : 23-11-2023

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1597.62 ಅಡಿ |
| ಒಳ ಹರಿವು | 681 ಕ್ಯುಸೆಕ್ |
| ಹೊರ ಹರಿವು | 9751 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 18.608 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1630.4 ಅಡಿ |
| ಒಳ ಹರಿವು | 2180 ಕ್ಯುಸೆಕ್ |
| ಹೊರ ಹರಿವು | 8238 ಕ್ಯುಸೆಕ್ |
| ಸಾಮರ್ಥ್ಯ | 95.581 ಟಿಎಂಸಿ |




ಮೈಕ್ರೋ ನ್ಯೂಸ್

## ಕೃಷಿ ಸಿಂಚಾಯಿ ಯೋಜನೆಯಡಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೂವಿನಹಡಗಲಿ:**
ಹೂವಿನಹಡಗಲಿ ತೋಟಗಾರಿಕೆ ಇಲಾಖೆಯಿಂದ 2023–24ನೇ ಸಾಲಿನ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿಅರ್ಜಿಆಹ್ವಾನಿಸಲಾಗಿದೆ.

ಈ ಯೋಜನೆಯಡಿಸಹಾಯಧನ ಪಡೆಯಲು ರೈತರು ಸ್ವಂತ ಜಮೀನು, ನೀರಾವರಿ ವುಳ್ಳವರಾಗಿರಬೇಕು. ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿರುವ ರೈತರಿಗೆ ಹನಿ ನೀರಾವರಿ ಉಪಕರಣಗಳನ್ನು ಅಳವಡಿಸಿಕೊಳ್ಳಲು ಅವಕಾಶವಿರುತ್ತದೆ. ಹನಿ ನೀರಾವರಿ ನೀರಾವರಿ ಕಾರ್ಯಕ್ರಮದಡಿ ಸರ್ಕಾರದ ಮಾರ್ಗಸೂಚಿಯನ್ವಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತರಿಗೆ ಶೇ.90ರಷ್ಟು ಸಹಾಯಧನ ಇತರೆ ವರ್ಗದ ರೈತರಿಗೆ ಶೇ.75ರಷ್ಟು ಸಹಾಯಧನವನ್ನು ಮೊದಲ 2.00 ಹೆಕ್ಟರ್ ಗೆ ನಂತರದ ಪ್ರದೇಶಕ್ಕೆ ಶೇ.45 ರಷ್ಟು ಸಹಾಯಧನ ಪಾವತಿಸ ಲಾಗುವುದು.

ಪರಿಶಿಷ್ಟ ಜಾತಿ, ಪಂಗಡ ರೈತರು ಆರ್. ಡಿಸಂಖ್ಯೆ ಇರುವಂತಹ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಅರ್ಹ ರೈತ ಫಲಾನುಭವಿಗಳು ಡಿಸೆಂಬರ್22 ರೊಳಗೆ ಅರ್ಜಿ ಸಲ್ಲಿಸಿ ಇಲಾಖೆಯಿಂದ ಹನಿ ನೀರಾವರಿ ಯೋಜನೆಯ ಸೌಲಭ್ಯವನ್ನು ಪಡೆದು ಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಹಡಗಲಿ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿ ಟಿ.ಸುಧಾಕರ ಮೊ.ನಂ:8105166176, ತೋಟಗಾರಿಕೆ ಸಹಾಯಕಿ ಶಿವಕಲ್ಲವ್ವ ಕೆ ಕುರಿ ಮೊ.ನಂ: 7760553810, ಇಟ್ಟಗಿ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿ ಹರೀಶಎಂ.ಆರ್ಮೊ.ನಂ: 9743674669 ಹಾಗೂ ತೋಟಗಾರಿಕೆ ಸಹಾಯಕ ರೇಣುಕ ಪ್ರಸಾದ್ ಕವಸರ ಮೊ.ನಂ: 9535910697 ಹಾಗೂ ಹಿರೇಹಡಗಲಿ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿ ಬಸಮ್ಮ ಸಂಡೂರು ಮೊ.ನಂ: 8497812276, ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಹೂವಿನಹಡಗಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ತಿಳಿಸಿದ್ದಾರೆ.

## ವಿವಿಧೆಡೆ ದಾಳಿ : ಬಾಲ ಕಾರ್ಮಿಕರ ರಕ್ಷಣೆ

**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲಾಧಿಕಾರಿಗಳ ನಿರ್ದೇಶನದ ಮೇರೆಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಬಾಲಕಾರ್ಮಿಕ ಯೋಜನೆ, ಕಾರ್ಮಿಕ ಇಲಾಖೆ, ಪೋಲಿಸ್ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣ ಘಟಕ, ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮತ್ತು ಚೈಲ್ಡ್‌ಲೈನ್ ಸಹಯೋಗದೊಂದಿಗೆ ಗುರುವಾರದಂದು, ನಗರದಲ್ಲಿ ವಿವಿಧೆಡೆ ದಾಳಿ ನಡೆಸಿ 02 ಬಾಲಕಾರ್ಮಿಕರು ಹಾಗೂ 02 ಕಿಶೋರ ಕಾರ್ಮಿಕರನ್ನು ರಕ್ಷಿಸಲಾಗಿದೆ ಎಂದು ಬಾಲ ಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕ ಎ.ಮೌನೇಶ್ ಅವರು ತಿಳಿಸಿದ್ದಾರೆ.

ಬಳ್ಳಾರಿ ನಗರದ ಗುಗ್ಗರಹಟ್ಟಿ, ಈದ್ಗಾ ದರ್ಗಾ ಹತ್ತಿರ ಮತ್ತು ವಿದ್ಯಾನಗರ ಮಂತಾದ ಸ್ಥಳಗಳಲ್ಲಿನ ಗ್ಯಾರೇಜ್, ಬೇಕರಿ, ಹೋಟೆಲ್, ಮೆಕ್ಯಾನಿಕ್ ಶಾಪ್, ಕಿರಾಣಿ ಅಂಗಡಿ ಇತ್ಯಾದಿ ಉದ್ದಿಮೆಗಳ ಮೇಲೆ ಆಕಸ್ಮಿಕ ದಾಳಿ ಮಾಡಿ 02 ಬಾಲಕಾರ್ಮಿಕ ಮಕ್ಕಳು ಮತ್ತು 02 ಕಿಶೋರ ಬಾಲಕಾರ್ಮಿಕ ಮಕ್ಕಳನ್ನು ರಕ್ಷಣೆ ಮಾಡಿ, ಕೆಲಸದಿಂದ ಬಿಡುಗಡೆಗೊಳಿಸಿ ಮಕ್ಕಳನ್ನು ಶಿಕ್ಷಣದ ಮುಖ್ಯ ವಾಹಿನಿಗೆ ತರಲು ಸಂಬಂಧಿಸಿದ ಇಲಾಖೆಗೆ ಒಪ್ಪಿಸಲಾಗಿದೆ.

ನಂತರ ಮಾಲೀಕರ ವಿರುದ್ಧ ಬಾಲಕಾರ್ಮಿಕ ಕಾಯ್ದೆ 1986 ರ ತಿದ್ದುಪಡಿ ಕಾಯ್ದೆ ಅಡಿಯಲ್ಲಿ ಎಫ್ಐಆರ್ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಮೌನೇಶ್ ಅವರು ತಿಳಿಸಿದ್ದಾರೆ. ಈ ಟಾಸ್ಕ್‌ಫೋರ್ಸ್ ಸಮಿತಿಯಲ್ಲಿ ವಿಶೇಷವಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಹೊಸಮನೆ, ಬಳ್ಳಾರಿ ತಹಶೀಲ್ದಾರ ಗುರುರಾಜ್, ಕಾರ್ಮಿಕ ನಿರೀಕ್ಷಕ ರವಿದಾಸ್, ಸಹಾಯಕ ಶಿಶು ಅಭಿವೃದ್ಧಿ ಯೋಜನೆ ಅಧಿಕಾರಿ ನಾಗಲಕ್ಷ್ಮೀ, ಇತರರಿದ್ದರು.

# ದುಡ್ಡಿಗಿಂತ ನಡೆ ನುಡಿಯ ಶ್ರೀಮಂತಿಕೆ ದೊಡ್ಡದು

### ಜಗದ್ಗುರು ಶ್ರೀ ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಹೇಳಿಕೆ । ಎಲ್ಲರ ಮುಖದಲ್ಲಿ ಮಂದಹಾಸ ತಂದ ಬಸವಣ್ಣ



> ನಗರದ ಪ್ರಮುಖ ವೃತ್ತದಲ್ಲಿ ವಿಶ್ವಗುರು ಬಸವಣ್ಣನ ಪುತ್ಥಳಿ ಸ್ಥಾಪನೆ ಮತ್ತು ಬಸವ ವೃತ್ತಕ್ಕಾಗಿ ಅನೇಕ ವರ್ಷಗಳಿಂದ ಹಿರಿಯರು, ಯುವಕರು ನಡೆಸಿದ ಹೋರಾಟಕ್ಕೆ ಇದೀಗ ಫಲ ಸಿಕ್ಕಿದೆ. ಬಸವ ಭಕ್ತರ ಸಂತಸ ಜಯಘೋಷಣೆಗಳೊಂದಿಗೆ ಮುಗಿಲು ಮಟ್ಟಿತು. ಕಿ.ಮೀ.ಉದ್ದಕ್ಕೂ ವಿವಿಧ ಕಲಾ ತಂಡಗಳು, ಭಕ್ತರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದು ವಿಶೇಷ. ವೃತ್ತ ನಿರ್ಮಾಣಕ್ಕೆ ಸ್ಥಳಕ್ಕೆ ಅನುಮತಿ ಕೊಟ್ಟಿದ್ದು ಆನಂದಸಿಂಗ್ ಆಗಿದ್ದಾರೆ. ಶಾಸಕ ಎಚ್.ಆರ್. ಗವಿಯಪ್ಪನವರ ನೇತೃತ್ವದಲ್ಲಿ ಪುತ್ಥಳಿ, ವೃತ್ತ ಲೋಕಾರ್ಪಣೆಗೊಂಡಿದೆ. ಬಸವ ಅನುಯಾಯಿಗಳ ಕನಸು ನನಸಾಗಿದೆ. ನಗರಸಭೆ ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವಸದಸ್ಯರು ಸೇರಿದಂತೆ ಸಹಕರಿಸಿದ ಸರ್ವ ಸಮಾಜದವರಿಗೂ ಅನಂತ ಧನ್ಯವಾದಗಳು.
>
> **। ಎಚ್.ವಿ.ಶರಣಸ್ವಾಮಿ**
> ವೀರಶೈವ ಲಿಂಗಾಯತ ಸಮಾಜದ ಹಿರಿಯ ಮುಖಂಡರು.

**■ ಹಂಪಿ ಟೈಮ್ಸ್ ಹೊಸಪೇಟೆ**
ಬಸವಣ್ಣ ಅಂದ್ರೆ ಲಿಂಗಾಯತ ಅಂತ ಭಾವಿಸಬಾರದು. ಆತ ವಿಶ್ವಕ್ಕೆ ಜ್ಯೋತಿಯಾದ ಜಗಜ್ಯೋತಿ ಬಸವೇಶ್ವರರಾಗಿದ್ದಾರೆ ಅಂತಹ ಮಹಾಪುರಷನ ಪುತ್ಥಳಿಯನ್ನು ಹೊಸಪೇಟೆ ನಗರದಲ್ಲಿ ಸ್ಥಾಪಿಸಿ ಅನಾವರಣಗೊಳಿಸಿರುವುದು ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಲ್ಲಿ ಬರೆದಂತಾಗಿದೆ ಎಂದು ಜಗದ್ಗುರು ಶ್ರೀ ಬಸವಲಿಂಗ ಮಹಾಸ್ವಾಮಿಗಳು ಹೇಳಿದರು.

ಹಂಪಿ ಹೇಮಕೂಟ ಶೂನ್ಯ ಸಿಂಹಾಸನಾಧೀರ್ಶವರ ಜಗದ್ಗರು ಕೊಟ್ಟೂರುಸ್ವಾಮಿ ಸಂಸ್ಥಾನಮಠದ ಹತ್ತೊಂಬತ್ತನೆ ಪೀಠಾಧಿಪತಿಗಳಾದ ಶ್ರೀ ಜಗದ್ಗುರು ಡಾ.ಸಂಗನಬಸವ ಮಹಾಸ್ವಾಮಿಗಳವರ ಪಟ್ಟಾಧಿಕಾರ ಸುವರ್ಣ ಮಹೋತ್ಸವ ಸ್ಮರಣಾರ್ಥ ವಿಶ್ವಗುರು ಶ್ರೀ ಬಸವೇಶ್ವರ ಅಶ್ವಾರೂಢ ಪುತ್ಥಲಿ ಮತ್ತು ವೃತ್ತ ಲೋಕಾರ್ಪಣಾ ಸಮಾರಂಭದಲ್ಲಿ ಬುಧವಾರ ಮಾತನಾಡಿದರು. ವೃತ್ತ ನಿರ್ಮಾಣಕ್ಕೆ ಮಾಜಿ ಸಚಿವ ಆನಂದಸಿಂಗ್ ಅವರ ಕೊಡುಗೆ ಅಪಾರ. ಈಗಿನ ಬಸವೇಶ್ವರ ವೃತ್ತದಲ್ಲಿ ಬಸವೇಶ್ವರ ಪುತ್ಥಳಿ ನಿರ್ಮಾಣಕ್ಕೆ ಏನೇ ಅಡ್ಡಿ ಆತಂಕಗಳು ಎದುರಾದರೂ ಸರಿ ನಾವಿದ್ದೇವೆ ನೀವು ಮಾಡಿ ಎಂದು ಆನಂದ್‌ಸಿಂಗ್ ಸಂಪೂರ್ಣ ಸಹಕಾರ ಬೆಂಬಲ ನೀಡಿ ಪ್ರೋತ್ಸಾಹಿಸಿದ್ದರ ಫಲವಾಗಿ ವೃತ್ತ ಕಾರ್ಯ ಆರಂಭಗೊಂಡಿತು. ಪುತ್ಥಳಿ ನಿರ್ಮಾಣಕ್ಕೆ ಸಮಾಜದ ಅನೇಕ ದಾನಿಗಳು, ನಗರಸಭೆ ಸದಸ್ಯರು ತನುಮನಧನದಿಂದ ಸಹಕಾರ ನೀಡಿದ್ದರ ಪರಿಣಾಮ ಇಂದು ಶಾಸಕ ಎಚ್.ಆರ್.ಗವಿಯಪ್ಪನವರ ನೇತೃತ್ವದಲ್ಲಿ ವೃತ್ತ, ಪುತ್ಥಳಿ ಲೋಕಾರ್ಪಣೆಗೊಂಡಿದೆ. ಎಲ್ಲರ ಸಹಕಾರಕ್ಕೆ ಅನಂತ ಧನ್ಯವಾದಗಳ ಎಂದರು.

ವೀರಶೈವ ಲಿಂಗಾಯತ ಸಮಾಜ ಹಿರಿಯರು, ಯುವಕರು ಒಗ್ಗಟ್ಟಿನಿಂದ ಸೇರಿ ಎಲ್ಲರ ತನುಮನಧನ ಸಹಕಾರದಿಂದ ವಿಶಿಷ್ಠವಾಗಿರುವ ಅಶ್ವರೂಢ ಕಂಚಿನ ಪುತ್ಥಳಿ ಅನಾವರಣ ಮತ್ತು ಬಸವೇಶ್ವರ ವೃತ್ತ ಮಾಡಿರುವುದು ಹೆಮ್ಮೆಯ ಸಂಗತಿ. ಏಳೆಂಟು ಜಿಲ್ಲೆಗಳಿಂದ ಲಿಂಗೈಕ್ಯ ಗುರುಗಳ ಮೇಲಿನ ಅಭಿಮಾನದಿಂದ ಭಕ್ತರು ಆಗಮಿಸಿದ್ದರು. ಸಚಿವ ಈಶ್ವರ ಖಂಡ್ರೆ ತಂದೆ ಹಾಗೂ ನಮ್ಮ ಗುರುಗಳ ನಡುವೆ ಅವಿನಾಭಾವ ಸಂಬಂಧವಿತ್ತು. ಈಗ ಈಶ್ವರ ಖಂಡ್ರೆ ಅವರು ಅದನ್ನು ಮುಂದುವರೆಸಿದ್ದಾರೆ. ಬಸವಣ್ಣ ಎಲ್ಲರ ಮುಖದಲ್ಲಿ ಮಂದಹಾಸ ತಂದಿದ್ದಾನೆ. ಎಲ್ಲರೂ ಸ್ವಾತಂತ್ರ್ಯಗೊಳ್ಳಬೇಕು ಎಂಬ ಚಿಂತನೆಯನ್ನು ಬಸವೇಶ್ವರ ನೀಡಿದ್ದಾರೆ. ಎಲ್ಲರ ಸೇವೆಗೂ ಬಸವಾದಿ ಶರಣರ ಆಶೀರ್ವಾದವಿರಲಿ. ಮನುಷ್ಯ ದುಡ್ಡಿನಿಂದ ದೊಡ್ಡವನಾಗಲ್ಲ. ನಡೆ ನುಡಿಗಳಿಂದ ದೊಡ್ಡವರಾಗಬೇಕು ಎಂದರು.

### ಇನ್ನೆಂದೂ ಈಗೆ ಮಾಡಲ್ಲ : ಗವಿಯಪ್ಪ

ಶಾಸಕ ಎಚ್.ಆರ್.ಗವಿಯಪ್ಪ ಅಧ್ಯಕ್ಷತೆವಹಿಸಿ ಮಾತನಾಡಿದರು. ಐದು ದಶಕಗಳ ಹಿಂದೆ ನಗರ ಚಿತ್ರಣವೇ ಬೇರೆ ಆಗಿತ್ತು. ಶ್ರೀಗಳ ಪರಿಶ್ರಮ, ಕಾಯಕ ನಿಷ್ಠೆ, ಧಾರ್ಮಿಕ ಚಿಂತನೆಗಳು ಈ ಭಾಗದ ಜನರ ಮೇಲೆ ಪರಿಣಾಮ ಬೀರಿದ ಪರಿಣಾಮ ನಗರ ಅಭಿವೃದ್ಧಿ ಹೊಂದಿದೆ. ಗುರುಗಳ ಮಾರ್ಗದರ್ಶನವೊಂದಿದ್ದಲೆ ಏನನ್ನಾದರೂ ಸಾಧಿಸಬಹುದು. ಬಸವಲಿಂಗ ಮಹಾಸ್ವಾಮಿಗಳು ನಮ್ಮ ಭಾಗಕ್ಕೆ ಮುತ್ತಿನಂತೆ ಇದ್ದಾರೆ. ನಾನು ಈ ಕಾರ್ಯಕ್ರಮವನ್ನು ರಾಜಕೀಯವಾಗಿ ಆಲೋಚನೆ ಮಾಡಿದೆ ವಿನಃ ಧರ್ಮದ ಕುರಿತು ಆಲೋಚಿಸಲಿಲ್ಲ. ಮುಂದೆಂದೂ ನಾನು ಈ ತಪ್ಪನ್ನು ಮಾಡುವುದಿಲ್ಲ. ಶ್ರೀಗಳು ಯಾರನ್ನೂ ಯಾವ ಪಕ್ಷದವರನ್ನೂ ಕರೆದರೂ ಅವರೊಂದಿಗೆ ಭಾಗವಹಿಸುತ್ತೇನೆ. ನೀವು ಹೇಗೆ ಹೇಳ್ತೀರಿ ಹಾಗೆ ಕೇಳ್ತೀವಿ. ನಿಮ್ಮ ಪಾದಕ್ಕೆ ಶರಣು ಎಂದರು.

ನಾಡಿನ ವಿವಿಧ ಮಠಗಳ ಶ್ರೀಗಳು, ವೀರಶೈವ ಲಿಂಗಾಯತ ಸಮಾಜದ ಹಿರಿಯ ಮುಖಂಡರಾದ ಎಚ್.ವಿ.ಶರಣಸ್ವಾಮಿ, ಕೆ.ರವಿಶಂಕರ, ಗೊಗ್ಗ ಚನ್ನಬಸವರಾಜ, ಕೆ.ಬಿ.ಶ್ರೀನಿವಾಸರೆಡ್ಡಿ, ಸೇರಿದಂತೆ ನಗರಸಭೆ ಸದಸ್ಯರು ಇತರರು ಇದ್ದರು.






ಇ–ಪೇಪರ್ ಉಚಿತ
ಇಂದೇ ಹಂಪಿ ಟೈಮ್ಸ್ ವಾಟ್ಸ್‌ಪ್ ಚಾನಲ್ ಸೇರಿ, ಇ–ಪೇಪರ್ ಉಚಿತವಾಗಿ ಪಡೆಯಿರಿ


# ಮನೆ ಮನೆಯಲ್ಲೂ ಕನ್ನಡ ಭಾಷೆ ಮೊಳಗಲಿ

### ಕರ್ನಾಟಕ ಏಕೀಕರಣ 50ನೇ ವರ್ಷಾಚರಣೆ ನಿಮಿತ್ತ 'ಕನ್ನಡ ವೈಭವ'ದಲ್ಲಿ ನಟ ನಿರ್ದೇಶಕ ಡಾ.ಎನ್.ಟಿ.ಜಯಪ್ರಕಾಶ್ ಕರೆ

**■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ:**
ಪ್ರತಿ ಮನೆ ಮನೆಯಲ್ಲೂ ತಮ್ಮ ಮಕ್ಕಳಿಗೆ ಕನ್ನಡ ಭಾಷೆಯ ಮಹತ್ವವನ್ನು ತಿಳಿಸಿಕೊಡಬೇಕು ಎಂದು ನಟ ನಿರ್ದೇಶಕ ಡಾ.ಎನ್.ಟಿ.ಜಯಪ್ರಕಾಶ್ ಕರೆ ನೀಡಿದರು.

ಪಟ್ಟಣದ ನೇಕಾರ್ ಕಾಲೂನಿಯಲ್ಲಿ, ಸ್ಥಳೀಯ ಕಲಾಭಾರತಿ ಸಾಹಿತ್ಯ ಶಿಕ್ಷಣ ಸಂಘದಿಂದ ಕರ್ನಾಟಕ ಏಕೀಕರಣ 50ನೇ ವರ್ಷದ ಸವಿನೆನಪಿಗಾಗಿ, ಸಾಲ್ಮನಿ ವಾಸಂತಿ ನೇತೃತ್ವದಲ್ಲಿ ಕನ್ನಡ ವೈಭವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಕ್ಕಳಿರುವಾಗಲೇ ಸಂಸ್ಕಾರ ಸಂಸ್ಕೃತಿಗಳನ್ನು ತಿಳಿಸಿಕೊಡುವ ಮೂಲಕ ಅವರಲ್ಲಿ ರಾಜ್ಯದ ಭಾಷೆ, ದೇಶಾಭಿಮಾನ ಬೆಳೆಸಬೇಕು ಎಂದರು.

ಗಣೇಶ ಹವಲ್ದಾರ್ ಮಾತನಾಡಿ, ಕರ್ನಾಟಕ ಏಕೀರಣ ಬಳಿಕ ದೇಶದ ಭೂಪಟದಲ್ಲಿ ಸುಂದರವಾಗಿ ಕಾಣುವ ಭೂ ಪ್ರದೇಶ ಹೊಂದಿರುವ ಕರ್ನಾಟಕದ ಚಿತ್ರವಾಗಿದೆ. ಆದರೂ, ಬಳ್ಳಾರಿಯ ಅನಂತಪುರ, ಮಂಗಳೂರಿನ ಕಾಸರಗೋಡು ಬೆಳಗಾವಿಯ ಕೆಲ ಗ್ರಾಮಗಳನ್ನು ಸೇರಿಸುವಲ್ಲಿ ಸೋತಿದ್ದೇವೆ ಎನ್ನುವುದು ಬೇಸರ ತರಿಸುತ್ತಿದೆ. ಆದರೂ ಮಹಾರಾಷ್ಟ್ರದವರು ಬೆಳಗಾವಿನಮ್ಮದೇಎಂದುಬೊಬ್ಬೆಹೊಡೆಯುತ್ತಿದ್ದಾರೆ. ಇಲ್ಲಿ ಸುಂದರವಾಗಿ ಕಾಣುವ ರಾಜ್ಯದ ಒಂದಿಂಚು ಭೂ ಪ್ರದೇಶವನ್ನು ನಾವು ಬೇರೆಯವರಿಗೆ ಬಿಟ್ಟುಕೊಡಲು ಸಾಧ್ಯವಿಲ್ಲ ಎನ್ನುವ ಜೊತೆಗೆ ನಾವು ಶಪಥ ಮಾಡಬೇಕು ಎಂದು ಕರೆ ನೀಡಿದರು.

ಕಸಾಪ ತಾಲೂಕು ಅಧ್ಯಕ್ಷ ಗೂಳೆಪ್ಪ ಹುಲಿಮನಿ ಮಾತನಾಡಿ, ಕನ್ನಡಿಗರು ನಾವು ತುಂಬ ಒಳ್ಳೆಯವರು, ನಮ್ಮ ತಂಟೆಗೆ ಬಂದರೆ ನಾವು ಹಠವಾದಿಗಳು ಎನ್ನುವುದು ಸಂದೇಶವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ವಾಸಂತಿ ಸಾಲ್ಮನಿ ಮಾತನಾಡಿ, ಕನ್ನಡ ವೈಭವವನ್ನು ಒಂದೇ ದಿನಕ್ಕೆ ಸೀಮಿತವಲ್ಲ, ಕನ್ನಡ ಭಾಷೆ, ನೆಲ, ಜಲಗಳ ಬಗ್ಗೆ ಪ್ರತಿಯೊಬ್ಬರಲ್ಲೂ ಕಾಳಜಿ ಇರಬೇಕು ಎಂದರು. ವಕೀಲರಾದ ರಮೇಶ್, ಅಕ್ಕಿ ಮಲ್ಲಿಕಾರ್ಜುನ, ನಿವೃತ್ತ ಇಂಜಿನಿಯರ್ ತಟ್ಟಿ ಸಣ್ಣಪ್ಪ, ತಂಬ್ರಹಳ್ಳಿ ನಾಗರಾಜ್ ಸೇರಿದಂತೆ ಸಾಹಿತಿಗಳು, ಕಲಾವಿದರು ಕೂಡ ಪಾಲ್ಗೊಂಡಿದ್ದರು. ಸುರೇಖಾ, ಕಾಗಿ ಪ್ರಹ್ಲಾದ್, ಸಿ. ಹುಲುಗಪ್ಪ ನಿರ್ವಹಿಸಿದರು.











Printed by: MANJUNATHA .H .B Published by: A. SHUBHA. Owned by: A. SHUBHA and Printed at: AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA